# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ


**ಇಂದಿನ ವಾಸ್ತವ**

ದೊಡ್ಡ ಮನೆ – ಚಿಕ್ಕ ಕುಟುಂಬ
ಹೆಚ್ಚು ಡಿಗ್ರಿ – ಕಡಿಮೆ ಜ್ಞಾನ
ಮುಂದುವರಿದ ವೈದ್ಯಕೀಯ – ಹೆಚ್ಚಿದ ಅನಾರೋಗ್ಯ
ಅಧಿಕ ಗಳಿಕೆ – ಕಳೆದುಹೋದ ಮನಃಶಾಂತಿ
ಹೆಚ್ಚಾದ ಬುದ್ಧಿವಂತಿಕೆ – ಕಡಮೆಯಾದ ಭಾವನೆಗಳು
ಗರಿಷ್ಠ ಜನಸಂಖ್ಯೆ – ಕನಿಷ್ಠ ಮಾನವೀಯತೆ
ದುಬಾರಿ ಗಡಿಯಾರ – ಕೈಗೆಟುಕದ ಸಮಯ
ಹೆಚ್ಚಾದ ಉಪಹಾರಗೃಹ – ಬರಿದಾದ ಹೊಟ್ಟೆ
ಹೆಚ್ಚು ಮಾಹಿತಿ – ಕಡಿಮೆ ವಿವೇಕ


ಸಂಪುಟ : 36 ಸಂಚಿಕೆ : 24 ಮನ್ಮಥ–ಕರ್ಕಾಟಕ ಕಲಿಯುಗಾಬ್ದ 5117 1–8–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಸಿಕ್ಕಿದೆ ಸ್ವಾತಂತ್ರ್ಯ – ದಕ್ಕಿಸಿಕೊಳ್ಳೋಣ

ಮತ್ತೊಮ್ಮೆ ಸ್ವಾತಂತ್ರ್ಯ ದಿನಾಚರಣೆಯ ಸಮಯ ಬಂದಿದೆ. ಆಗಸ್ಟ್ 15ರಂದು ಸ್ವಾತಂತ್ರ್ಯ ದಿನೋತ್ಸವ ಭರಾಟೆ ಎಲ್ಲೆಡೆ! ಎಲ್ಲೆಲ್ಲೂ ರಾಷ್ಟ್ರಧ್ವಜವೇ! ಶಾಲೆ ಕಾಲೇಜುಗಳಲ್ಲಿ ಉದ್ದುದ್ದ ಭಾಷಣಗಳೂ, ಫೇಸ್‌ಬುಕ್, ವಾಟ್ಸ್ ಆ್ಯಪ್‌ಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯ ವಿನಿಮಯಗಳೂ, ಟಿವಿಗಳಲ್ಲಿ ಸ್ವಾತಂತ್ರ್ಯದ ಬಗ್ಗೆ ಬಿಸಿಬಿಸಿ ಚರ್ಚೆಗಳೂ ಜೋರಾಗಿಯೇ ನಡೆಯುತ್ತವೆ. ಆಗಸ್ಟ್ 16 ಬಂದರೆ, ಮತ್ತೆ ಎಲ್ಲರೂ ಅವರವರ ಕೆಲಸಕಾರ್ಯಗಳಲ್ಲಿ ಮುಳುಗುವವರೇ. ಮುಂದಿನ ವರ್ಷ ಆಗಸ್ಟ್ 15 ರವರೆಗೆ 'ಭಾರತ್ ಮಾತಾ ಕೀ ಜಯ್' ಮರೆತು ಹೋಗಿರುತ್ತದೆ! ಇದು ನಮ್ಮ ದೇಶದ ಹೆಚ್ಚಿನವರ ಕತೆ!

ಆದರೆ, ಸ್ವಾತಂತ್ರ್ಯ ದಿನಾಚರಣೆ ಮಾಡಿದ ಮಾತ್ರಕ್ಕೆ ನಮ್ಮ ಜವಾಬ್ದಾರಿ ಮುಗಿಯಿತೇ? ನಿಜವಾಗಿಯೂ ಸ್ವತಂತ್ರ ದೇಶದ ಪ್ರಜೆಗಳಾಗಿ ನಮ್ಮ ಮೇಲಿರುವ ಜವಾಬ್ದಾರಿಗಳೇನು ಎಂದು ಯೋಚಿಸುವವರ ಸಂಖ್ಯೆ ಮಾತ್ರ ಬಹಳ ಕಡಿಮೆ. ನಮಗೆ ಸ್ವಾತಂತ್ರ್ಯ ಬಂದು 69 ವರ್ಷಗಳಾಗಿವೆ. ಇಂದು ನಮ್ಮ ಪ್ರಧಾನಿಯಾದಿಯಾಗಿ ಹೆಚ್ಚಿನ ಪ್ರಜೆಗಳು ಸ್ವಾತಂತ್ರ್ಯ ಬಂದ ನಂತರ ಹುಟ್ಟಿದವರಾಗಿದ್ದೇವೆ. ನಮಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಅನುಭವವಾಗಲೀ ಅಥವಾ ಬ್ರಿಟಿಷರ ಆಡಳಿತದ ದಿನಗಳ ಗುಲಾಮಗಿರಿಯ ಬದುಕಿನ ಕಲ್ಪನೆಗಳಾಗಲೀ ಇಲ್ಲ. ಕೆಲವೊಂದರ ನಿಜವಾದ ಬೆಲೆ ತಿಳಿಯುವುದು ನಾವದನ್ನು ಕಳೆದುಕೊಂಡಾಗ ಮಾತ್ರ ಎಂಬ ಮಾತಿದೆ. ಅದೇ ರೀತಿ ಸ್ವಾತಂತ್ರ್ಯದ ನಿಜವಾದ ಬೆಲೆ ನಮಗೆ ತಿಳಿದಿದೆಯೇ ಎಂಬ ಪ್ರಶ್ನೆ ಕೆಲವೊಮ್ಮೆ ನಮ್ಮಲ್ಲಿ ಮೂಡುತ್ತದೆ. ದೇಶ ಕಾಯುವುದು ಯೋಧನ ಕೆಲಸ, ಉಳಿದದ್ದೆಲ್ಲ ಸರ್ಕಾರದ ಕೆಲಸ, ಆಗಾಗ್ಗೆ ತೆರಿಗೆ ಪಾವತಿಸುವುದು ಹಾಗೂ ಮತ ಚಲಾಯಿಸುವುದಷ್ಟೇ ನಮ್ಮ ಕೆಲಸವೆನ್ನುವಷ್ಟರ ಮಟ್ಟಿಗೆ ನಾವು ನಮ್ಮ ನಮ್ಮದೇ ವೈಯಕ್ತಿಕ ಜೀವನದಲ್ಲಿ ಮುಳುಗಿಹೋಗಿದ್ದೇವೆ ಎಂದೆನಿಸುತ್ತದೆ.

ದೇಶ ನನ್ನದೇ, ಸಮಾಜ ನನ್ನದೇ! ಇದು ಸರ್ಕಾರದ್ದಲ್ಲ ಎಂದು ನೆನಪಿಸಿಕೊಳ್ಳಬೇಕಾದ ಆವಶ್ಯಕತೆ ಇಂದು ಖಂಡಿತಾ ಇದೆ. ದೇಶಭಕ್ತಿ ಹೊಂದಿದ ಹಾಗೂ ಶಿಸ್ತನ್ನುಳ್ಳ ಪ್ರಜೆಗಳಿಂದ ಮಾತ್ರ ಯಾವುದೇ ದೇಶದ ಅಭಿವೃದ್ಧಿ ಸಾಧ್ಯವೆಂಬುದು ಹಲವು ಅಭಿವೃದ್ಧಿ ಹೊಂದಿರುವ ದೇಶಗಳು ಕಂಡುಕೊಂಡಿರುವ ಸತ್ಯ. ಪ್ರಪಂಚದ ಕೆಲವು ದೇಶಗಳಲ್ಲಿ ಪ್ರತಿಯೊಬ್ಬ ಪ್ರಜೆಯೂ ಕನಿಷ್ಠ ಒಂದು ಅಥವಾ ಎರಡು ವರ್ಷಗಳ ಕಾಲ ಸೈನಿಕರಾಗಿ ಸೇವೆ ಸಲ್ಲಿಸಬೇಕು ಎಂಬ ನಿಯಮವಿದೆ. ಇದರಿಂದ ದೇಶದ ಬಗ್ಗೆ ಅಭಿಮಾನ ಮೂಡುತ್ತದೆ. ಈ ದೇಶ ನನ್ನದು ಎಂಬ ಭಾವನೆ ಬರುತ್ತದೆ. ದೇಶಕ್ಕಾಗಿ ಕೆಲಸ ಮಾಡುವ ಇಚ್ಛೆ ಬೆಳೆಯುತ್ತದೆ. ನಮ್ಮಲ್ಲೇನೂ ಅಂತಹ ಕಾನೂನಿಲ್ಲ. ಅಂದ ಮಾತ್ರಕ್ಕೆ ಆ ಗುಣಗಳನ್ನು ಬೆಳೆಸಿಕೊಳ್ಳುವುದರಿಂದ ನಮಗೇನೂ ವಿನಾಯ್ತಿಯಿಲ್ಲವಷ್ಟೇ! ಈ ದೇಶ ನನ್ನದೆಂಬ ಭಾವನೆ, ದೇಶದ ಬಗ್ಗೆ ಪ್ರೀತಿ, ಅಭಿಮಾನಗಳು ಪ್ರತಿಯೊಬ್ಬ ಪ್ರಜೆಯಲ್ಲಿಯೂ ಇರಬೇಕಾದ ಗುಣಗಳು.




'ಪ್ರಜೆಗಳೇ ಪ್ರಭುಗಳು' ಎಂದ ನಾವು ಪ್ರಜಾಪ್ರಭುತ್ವವನ್ನು ಆಯ್ದುಕೊಂಡಿದ್ದೇವೆ. ನಮ್ಮ ದೇಶ ಹೇಗೆ ನಡೆಯಬೇಕು, ನಾವು ಹೇಗೆ ಇರಬೇಕು ಎನ್ನುವುದಕ್ಕೆ ಸಂವಿಧಾನವೇ ನಮಗೆ ಮಾರ್ಗದರ್ಶಿ. ನಾವೇ ತಯಾರಿಸಿಕೊಂಡ ನಮ್ಮ ದೇಶದ ಸಂವಿಧಾನದಲ್ಲಿ ಹೇಳಿರುವ 10 ಕರ್ತವ್ಯಗಳು ನಮಗೆ ತಿಳಿದೇ ಇವೆ. ಹಾಗೆಯೇ ಒಬ್ಬ ಜವಾಬ್ದಾರಿಯುತ ಪ್ರಜೆಯಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾಗಿರುವ ಕೆಲವು ಸರಳ ಅಂಶಗಳಿವೆ. ಇವ್ಯಾವುವೂ ನಮಗೆ ತಿಳಿದಿರದ ವಿಚಾರಗಳಲ್ಲದಿದ್ದರೂ, ಆಗಾಗ್ಗೆ ನೆನಪಿಸಿಕೊಳ್ಳಬೇಕಾದಂತಹ ವಿಷಯಗಳು ಎಂಬುದಂತೂ ಸತ್ಯ.

- ನಮ್ಮ ರಾಷ್ಟ್ರಧ್ವಜ, ರಾಷ್ಟ್ರಗೀತೆ, ಸಂವಿಧಾನ ಮತ್ತು ದೇಶವನ್ನು ಗೌರವಿಸುವುದು ನಮ್ಮ ಮೊದಲ ಕರ್ತವ್ಯ. ಎಂಥಾ ಸನ್ನಿವೇಶಗಳೇ ಬಂದರೂ ನಾವು ನಮ್ಮ ದೇಶವನ್ನು ದೂಷಿಸಬಾರದು. ಇಂದು ಹಲವರಿಗೆ ನಮ್ಮ ದೇಶವನ್ನು, ಇಲ್ಲಿನ ವ್ಯವಸ್ಥೆಯನ್ನು ದೂಷಿಸುವುದು ಒಂದು ಫ್ಯಾಷನ್ ಆಗಿಹೋಗಿದೆ. ಬಹುಶಃ ತನ್ನ ದೇಶವನ್ನು ತಾನೇ ದೂಷಿಸಿಕೊಂಡು, ಗೇಲಿ ಮಾಡಿಕೊಂಡು ಖುಷಿ ಪಡುವಂತಹ ಪ್ರಜೆಗಳಿರುವುದು ಭಾರತದಲ್ಲಿ ಮಾತ್ರ. ನಮ್ಮಲ್ಲಿ ಹೆಮ್ಮೆ ಪಡುವಂತಹ ವಿಷಯಗಳು ಸಾಕಷ್ಟಿವೆ. ಹಾಗೆಯೇ ಸಮಸ್ಯೆಗಳೂ ಕೂಡ. ಆದರೆ ಇದಕ್ಕೆ ಪರಿಹಾರ ಕಂಡುಕೊಳ್ಳುವುದು ನಮ್ಮ ಜವಾಬ್ದಾರಿ. ನಮ್ಮ ದೇಶವನ್ನು ನಾವೇ ನಿಂದಿಸುವುದು ನಾವು ಊಟ ಮಾಡುವ ತಟ್ಟೆಯಲ್ಲಿ ನಾವೇ ಉಗಿದಂತೆ. "ಸ್ವಯಮೇವ ಮೃಗೇಂದ್ರತಾ" ಎನ್ನುವಂತೆ ಯಾವುದೇ ದೇಶ ತನ್ನದೇ ಆದ ಮೌಲ್ಯಗಳು, ಸಾಮರ್ಥ್ಯ, ತ್ಯಾಗ ಮತ್ತು ಶ್ರಮದಿಂದ ಮಾತ್ರ ಎತ್ತರಕ್ಕೆ ಬೆಳೆಯಲು ಸಾಧ್ಯ, ಅದಕ್ಕೆ ಯಾರ ಅನುಮೋದನೆಯ ಅಗತ್ಯವೂ ಇಲ್ಲ.
- ನಮ್ಮ ಸ್ವಾತಂತ್ರ್ಯ ಹೋರಾಟ ಮತ್ತು ಅಂದು ದೇಶಕ್ಕಾಗಿ ಬಲಿದಾನ ಮಾಡಲು ಪ್ರೇರಣೆ ಕೊಟ್ಟ ಸಂಗತಿಗಳು ನಮಗೆ ಸದಾ ನೆನಪಿರಬೇಕು ಮತ್ತು ಅವನ್ನು ಗೌರವಿಸಬೇಕು. ದೇಶಕ್ಕಾಗಿ ಹುತಾತ್ಮರಾದವರನ್ನು ಮರೆಯಲೇಬಾರದು. ಸ್ವಾತಂತ್ರ್ಯ ಹೋರಾಟಗಾರರಿರಲಿ ಅಥವಾ ಗಡಿ ಕಾಯುವ ಸೈನಿಕರೇ ಆಗಿರಲಿ, ಇವರ ತ್ಯಾಗದಿಂದಾಗಿಯೇ ನಾವು ಇಂದು ನೆಮ್ಮದಿಯಿಂದ ಬದುಕುತ್ತಿರುವುದು ಎಂಬುದನ್ನು ಮರೆಯಬಾರದು. "ಯಾವ ದೇಶ ತನ್ನ ಹುತಾತ್ಮರನ್ನು ಮರೆಯುತ್ತದೆಯೋ ಆ ದೇಶವೇ ಮರೆತುಹೋಗುವಂತಾಗುತ್ತದೆ" ಎಂಬ ಮಾತನ್ನು ಅಮೆರಿಕದ 30ನೇ ಅಧ್ಯಕ್ಷರಾಗಿದ್ದ ಕಾಲ್ವಿನ್ ಕೋಲಿಡ್ಜ್ ಒಮ್ಮೆ ಹೇಳಿದ್ದರು. ಇದು ಇಂದಿಗೂ ಅತ್ಯಂತ ಪ್ರಸ್ತುತ.
- ದೇಶದ ಏಕತೆ, ಸಾರ್ವಭೌಮತೆಯನ್ನು ಎತ್ತಿ ಹಿಡಿಯುವುದು ನಮ್ಮೆಲ್ಲರ ಕರ್ತವ್ಯ. ದೇಶದ ಗಡಿಯ ಪ್ರಶ್ನೆ ಬಂದಾಗ, ದೇಶದ ಮರ್ಯಾದೆಯ ಪ್ರಶ್ನೆ ಬಂದಾಗ ದೇಶನಿಷ್ಠೆಯನ್ನು ಪ್ರದರ್ಶಿಸಬೇಕಾದ್ದು ನಮ್ಮ ಕರ್ತವ್ಯ. ಎಂತಹ ಕಷ್ಟಕರ ಸಂದರ್ಭದಲ್ಲೂ ದೇಶಕ್ಕೆ ನಷ್ಟವಾಗುವ ನಿರ್ಧಾರಗಳನ್ನು ಕೈಗೊಳ್ಳದಿರುವುದು ಪ್ರಜೆಯೊಬ್ಬನ ವ್ರತವಾಗಬೇಕು. ವ್ಯಕ್ತಿಗಿಂತ ದೇಶ ದೊಡ್ಡದು ಎನ್ನುವುದು ಪ್ರತಿಯೊಬ್ಬರ ಮಂತ್ರವಾಗಬೇಕು.
- ದೇಶಕ್ಕೆ ಸಂಕಷ್ಟ ಬಂದಾಗ, ನಮ್ಮ ದೇಶದ ರಕ್ಷಣೆಗೆ ಧಾವಿಸುವುದು. ಅದು ಪ್ರಕೃತಿ ವಿಕೋಪವಿರಬಹುದು ಅಥವಾ ಯುದ್ಧದಂತಹ ತುರ್ತು ಸಂದರ್ಭವಿರಬಹುದು. ದೇಶದ ಕರೆಗೆ ಓಗೊಡಬೇಕಾದ್ದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಎಲ್ಲವನ್ನೂ ಸರ್ಕಾರದ ಮೇಲೆ ಬಿಟ್ಟು ತನ್ನ ಪಾಡಿಗೆ ತಾನಿರುವುದು ಜವಾಬ್ದಾರಿಯುತ ಪ್ರಜೆಗಳ ಲಕ್ಷಣವಲ್ಲ.
- ಭಾಷೆ, ಪ್ರಾಂತ, ಜಾತಿಮತಗಳನ್ನು ಮೀರಿ ದೇಶವಾಸಿಗಳೆಲ್ಲರಲ್ಲಿ ಸಹೋದರತ್ವವನ್ನು ಕಾಣುವ, ಮಹಿಳೆಯರನ್ನು ಗೌರವಿಸುವ ಜವಾಬ್ದಾರಿಯೂ ಕೂಡ ನಮ್ಮ ಮೇಲಿದೆ. ಜಾತಿಭೇದ ಮಾಡದೇ ಸಾಮರಸ್ಯವನ್ನು ಆಚರಣೆಗೆ ತರುವ ಮತ್ತು ಅದನ್ನು ಇಡೀ ಸಮಾಜದಲ್ಲಿ ತರುವುದಕ್ಕಾಗಿ ಕೆಲಸ ಮಾಡುವುದೂ ಕೂಡ ನಮ್ಮೆಲ್ಲರ ಹೊಣೆ.
- ನಮ್ಮ ದೇಶದ ಶ್ರೀಮಂತ ಸಂಸ್ಕೃತಿ, ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದೂ ಭಾರತೀಯರೆಲ್ಲರ ಕರ್ತವ್ಯ. ನಮ್ಮ ದೇಶದ ಇತಿಹಾಸ, ಸಂಸ್ಕೃತಿಗಳು ಬೇರೆಲ್ಲಿಯೂ ಸಿಗದಂತಹವು. ನಮ್ಮ ಪ್ರಾಚೀನ ನಾಗರಿಕತೆಯ ಕುರುಹುಗಳು, ಸ್ಮಾರಕಗಳ ರಕ್ಷಣೆ ಅಗತ್ಯ. ಅಲ್ಲದೇ, ಸಂಸ್ಕೃತಿಯ ಬಗ್ಗೆ ಕೇವಲ ಮಾತನಾಡಿದರೆ ಸಾಲದು. ಅದನ್ನು ಆಚರಿಸಿದರೆ ಮಾತ್ರ ಅದು ಉಳಿಯಬಲ್ಲದು. ಕೇವಲ ಪುಸ್ತಕದಲ್ಲಿರುವ ಸಂಸ್ಕೃತಿಯಿಂದ ಏನು ಪ್ರಯೋಜನ? ಅದನ್ನು ನಮ್ಮ ಜೀವನದಲ್ಲಿ ಆಚರಿಸುವುದೂ ನಮ್ಮ ಕರ್ತವ್ಯ.
- ನಮ್ಮ ದೇಶದ ಪ್ರಾಕೃತಿಕ ಸಂಪತ್ತನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯಗಳಲ್ಲೊಂದು. ನದಿ, ಕಾಡು, ಪ್ರಾಣಿ–ಪಕ್ಷಿಗಳು ಇವೆಲ್ಲ ನಮ್ಮ ಪರಿಸರದ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಸಹಕಾರಿ. ಪರಿಸರವನ್ನು ಪ್ರೀತಿಸುವುದೂ, ಪ್ರಾಣಿದಯೆಯನ್ನು ಬೆಳೆಸಿಕೊಳ್ಳುವುದೂ, ಪ್ರಕೃತಿಯೊಂದಿಗೆ ಸಹಬಾಳ್ವೆ ನಡೆಸಲು ಬೇಕಾದ


*2ನೇ ಪುಟಕ್ಕೆ...*


**ಒಮ್ಮೆ ಭಾರತೀಯ ಇಂಜಿನಿಯರ್ ಒಬ್ಬರು ತಮ್ಮ ಕೆಲಸದ ಮೇಲೆ ಜಪಾನಿಗೆ ತೆರಳಿದ್ದರು. ಅಲ್ಲಿ ತಂಗಿದ್ದ ವೇಳೆ ಅಲ್ಲಿಯ ತಮ್ಮ ಪ್ರವಾಸದ ನೆನಪುಗಳನ್ನು ಸೆರೆಹಿಡಿಯುವ ಸಲುವಾಗಿ ಒಂದು ಕ್ಯಾಮರವನ್ನು ಅಲ್ಲೇ ಖರೀದಿಸಿ ಹಲವು ಫೋಟೋಗಳನ್ನು ತೆಗೆದಿದ್ದರು. ಹಿಂದಿರುಗುವಾಗ ಅವರನ್ನು ವಿಮಾನ ನಿಲ್ದಾಣದವರೆಗೆ ಕಳುಹಿಸಲೆಂದು ಅವರ ಜಪಾನಿ ಸಹೋದ್ಯೋಗಿಯೊಬ್ಬರು ಅವರೊಡನೆ ಬಂದಿದ್ದರು. ವಿಮಾನ ನಿಲ್ದಾಣಕ್ಕೆ ಬಂದ ನಂತರ ತಮ್ಮ ಕ್ಯಾಮರ ಎಲ್ಲೋ ಕಳೆದುಕೊಂಡಿರುವ ವಿಚಾರ ಅವರಿಗೆ ತಿಳಿಯಿತು ಹಾಗೂ ಅವರು ಈ ವಿಚಾರವನ್ನು ತನ್ನ ಸಹೋದ್ಯೋಗಿಯ ಬಳಿ ಹೇಳಿದರು. ಈ ವಿಚಾರ ಕೇಳಿದ ಕೂಡಲೇ ಆ ವ್ಯಕ್ತಿ ಕ್ಯಾಮರದ ಕಂಪನಿಯ ಹೆಸರು ಹಾಗೂ ಮಾಡೆಲ್ ನಂಬರ್ ತಿಳಿದುಕೊಂಡು, ಅಲ್ಲಿಯೇ ಒಂದು ಅದೇ ಮಾದರಿಯ ಹೊಸ ಕ್ಯಾಮರ ಖರೀದಿಸಿ ಅವರ ಕೈಯಲ್ಲಿತ್ತ. ಆಶ್ಚರ್ಯಗೊಂಡ ಅವರು ಹಣಕೊಟ್ಟರೂ ಆತ ತೆಗೆದುಕೊಳ್ಳಲಿಲ್ಲ ಅದರ ಬದಲಿಗೆ ಒಂದು ಮಾತು ಹೇಳಿದ "ಜಪಾನಿನಲ್ಲಿ ನನ್ನ ಕ್ಯಾಮರ ಕಳೆದು ಹೋಯಿತು ಎಂದು ದಯವಿಟ್ಟು ಯಾರ ಬಳಿಯೂ ಹೇಳಬೇಡಿ" ಅಂತ. ಅಂತಹ ದೇಶಾಭಿಮಾನ ಜಪಾನೀಯರದ್ದು!**

ಸಮರ್ಥ ಭಾರತ
ಒಂದು ಗುರಿ - ಹಲವು ದಾರಿ

# ಮಹಿಳೆಯರ ಸುರಕ್ಷತೆ ಮತ್ತು ಭದ್ರತೆ

'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಂದು ಮನುಸ್ಮೃತಿಯಲ್ಲಿ ಹೇಳಿದಂತೆ ಸ್ತ್ರೀಯನ್ನು ತಾಯಿಯ ಸ್ಥಾನದಲ್ಲಿ ಪೂಜಿಸುವ ಪರಂಪರೆ ನಮ್ಮದು. ಆದರೆ ಹೆಣ್ಣು ಭ್ರೂಣ ಹತ್ಯೆಯಂತಹ ಭೀಕರ ಪಾಪದಿಂದ ಮೊದಲ್ಗೊಂಡು ವರದಕ್ಷಿಣೆಗಾಗಿ ಹಿಂಸೆ, ಅತ್ಯಾಚಾರ, ಲೈಂಗಿಕ ಕಿರುಕುಳ, ಆ್ಯಸಿಡ್ ಎರಚುವುದು, ಮಹಿಳೆಯರ ಕಳ್ಳಸಾಗಣೆ, ಔದ್ಯೋಗಿಕ ಅಸಮಾನತೆ, ಕತ್ತಿನ ಸರ ಅಪಹರಣ, ಕೌಟುಂಬಿಕ ಹಿಂಸೆ ಮೊದಲಾದ ವಿವಿಧ ರೀತಿಯಲ್ಲಿ ಹೆಣ್ಣು, ಅಮಾನವೀಯ ದೌರ್ಜನ್ಯಕ್ಕೊಳಗಾಗುತ್ತಿರುವುದು ನಾಗರಿಕ ಸಮಾಜದ ವಿಪರ್ಯಾಸಗಳಲ್ಲೊಂದು.

ಪೊಲೀಸ್ ದಾಖಲೆಗಳ ಪ್ರಕಾರ ಮಹಿಳೆಯರ ವಿರುದ್ಧದ ಅಪರಾಧಗಳು ಜನಸಂಖ್ಯೆಗಿಂತಲೂ ವೇಗವಾಗಿ ಹೆಚ್ಚುತ್ತಿವೆ. ಈ ಹಿಂದೆ, ಸಾಮಾಜಿಕ ಕಳಂಕ ಹಾಗೂ ಸಾಮಾಜಿಕ ಅವಮಾನಗಳ ಭಯದಿಂದಾಗಿ ಬಹುತೇಕ ಅತ್ಯಾಚಾರ ಮತ್ತು ಹಿಂಸೆಯ ಪ್ರಕರಣಗಳು ದಾಖಲಾಗುತ್ತಿರಲಿಲ್ಲ. ಕೇಂದ್ರ ಸರ್ಕಾರದ ಗೃಹ ಇಲಾಖೆಯ ರಾಷ್ಟ್ರೀಯ ಅಪರಾಧ ದಾಖಲೆಗಳ ಪ್ರಕಾರ ಮಹಿಳೆಯರ ಮೇಲೆ ನಡೆಯುತ್ತಿರುವ ಅಪರಾಧಗಳಲ್ಲಿ ವರ್ಷದಿಂದ ವರ್ಷಕ್ಕೆ ನಿರಂತರ ಏರಿಕೆ ಕಂಡುಬಂದಿದೆ. 2009ರಲ್ಲಿ 2,03,804 ಪ್ರಕರಣಗಳು ದಾಖಲಾಗಿದ್ದರೆ 2012 ಮತ್ತು 2013 ರಲ್ಲಿ ಕ್ರಮವಾಗಿ 2,44,270 ಮತ್ತು 3,09,546 ಪ್ರಕರಣಗಳು ದಾಖಲೆಗೊಂಡಿವೆ. ಆತಂಕಕಾರಿ ವಿಷಯವೆಂದರೆ 2012ರಿಂದ 2013ಕ್ಕೆ 26.7%ರಷ್ಟು ಏರಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ಅಸಹಾಯಕ ಸ್ತ್ರೀಯರನ್ನು ದೌರ್ಜನ್ಯದಿಂದ ಮುಕ್ತಗೊಳಿಸಿ ಸಮಾಜದಲ್ಲಿ ಮಹಿಳೆಯರನ್ನು ಗೌರವಪೂರ್ಣವಾಗಿ ನಡೆಸಿಕೊಳ್ಳುವಂತಹ ಸಂವೇದನಶೀಲ ವಾತಾವರಣ ನಿರ್ಮಿಸಬೇಕಾದುದು ಸಮಾಜದ ಹೊಣೆಯಾಗಿದೆ.

## ಚಟುವಟಿಕೆಯ ಬಗ್ಗೆ

ಮಹಿಳಾ ಸುರಕ್ಷತೆ, ಭದ್ರತೆ ಮತ್ತು ಸಬಲೀಕರಣದ ಕ್ಷೇತ್ರದಲ್ಲಿ ಅನೇಕ ಸರ್ಕಾರ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳು ಹಾಗೂ ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಥೂಲವಾಗಿ ಕೆಲವು ಚಟುವಟಿಕೆಗಳನ್ನು ಇಲ್ಲಿ ಪಟ್ಟಿಮಾಡಲಾಗಿದೆ:

- ಮಹಿಳಾ ಸುರಕ್ಷತೆ ಮತ್ತು ಸ್ತ್ರೀಯರ ಹಕ್ಕುಗಳ ಕುರಿತು ಸಮಾಜದಲ್ಲಿ ಸಂವೇದನೆ ಮತ್ತು ಜಾಗೃತಿ ಮೂಡಿಸುವುದು; ಉದಾಹರಣೆಗೆ ಶಾಲಾ ಕಾಲೇಜುಗಳಲ್ಲಿ ಪ್ರಬಂಧ ಸ್ಪರ್ಧೆಗಳನ್ನು ಹಾಗೂ ಸೆಮಿನಾರ್‌ಗಳನ್ನು ಏರ್ಪಡಿಸುವುದು, ಕಾರ್ಖಾನೆಗಳಲ್ಲಿ ಕಾರ್ಯಾಗಾರಗಳನ್ನು ನಡೆಸುವುದು, ಸಾರ್ವಜನಿಕ ಸಂವಾದಗಳನ್ನು ಆಯೋಜಿಸುವುದು, ಬೀದಿ ನಾಟಕಗಳು, ಭಿತ್ತಿ ಪತ್ರಗಳು, ಕರಪತ್ರಗಳ ಮೂಲಕ ಜನರನ್ನು ತಲುಪುವುದು ಇತ್ಯಾದಿ
- ಮಹಿಳೆಯರ ಸಂಘಟನೆ ಮತ್ತು ಇಂತಹ ಸಂಘಟನೆಗಳ ಮೂಲಕ ಸಾಮಾಜಿಕ ಜಾಗೃತಿ ಮತ್ತು ಕಾನೂನು ಹೋರಾಟ ಇತ್ಯಾದಿ
- ಮಹಿಳಾ ಸಹಕಾರಿ ಸಂಘ ಮತ್ತು ಸ್ವಸಹಾಯ ಸಂಘಗಳ ಮೂಲಕ ಸಬಲೀಕರಣ
- ಸ್ತ್ರೀಯರ ಸುರಕ್ಷತೆ ಮತ್ತು ಭದ್ರತೆಯಲ್ಲಿ ಕೆಲಸಮಾಡಬಲ್ಲ ಸ್ವಯಂ ಸೇವಕರನ್ನು ತಯಾರು ಮಾಡುವುದು. ಅವರಿಗೆ ತರಬೇತಿ ನೀಡುವುದು
- ಯುವತಿಯರಿಗೆ ಸ್ವರಕ್ಷಣೆಯ ತರಬೇತಿ
- ಶಾಲೆ ಕಾಲೇಜುಗಳಲ್ಲಿ ನೈತಿಕ ಶಿಕ್ಷಣ ನಿಡುವುದು
- ಮಹಿಳಾ ಸುರಕ್ಷತಾ ಸಹಾಯವಾಣಿ, ಇ–ಮೇಲ್, ಸಾಮಾಜಿಕ ಜಾಲತಾಣಗಳಲ್ಲಿ ಗ್ರೂಪ್‌ಗಳು ಮೊದಲಾದವುಗಳ ಮೂಲಕ ಸಂಕಷ್ಟದ ಸಮಯದಲ್ಲಿ ನೆರವಾಗಬಲ್ಲ ವ್ಯವಸ್ಥೆ

## ಸಂಘಟನೆಗಳು

**ರಾಷ್ಟ್ರ ಸೇವಿಕಾ ಸಮಿತಿ:** ಸಾಪ್ತಾಹಿಕ ವರ್ಗಗಳನ್ನು ನಡೆಸಿ ಮಹಿಳೆಯರಿಗೆ ವಿವಿಧ ಶಾರೀರಿಕ ಮತ್ತು ಬೌದ್ಧಿಕ ಚಟುವಟಿಕೆಗಳ ಮೂಲಕ ಸ್ವರಕ್ಷಣೆ, ವ್ಯಕ್ತಿತ್ವ ವಿಕಸನ, ಸಾರ್ವಜನಿಕ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಅಗತ್ಯ ತರಬೇತಿಗಳನ್ನು ನೀಡುತ್ತಿದೆ.

**ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎ.ಬಿ.ವಿ.ಪಿ.):** ದೇಶದ ಅತಿ ದೊಡ್ಡ ವಿದ್ಯಾರ್ಥಿ ಸಂಘಟನೆಯಾಗಿದ್ದು ಶಾಲೆ ಕಾಲೇಜುಗಳಲ್ಲಿ ಮಹಿಳಾ ಸುರಕ್ಷೆ, ಸಮಾನತೆ ಮತ್ತು ಭದ್ರತೆಯ ಕುರಿತು ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿದೆ. ಮಹಿಳಾ ದೌರ್ಜನ್ಯದ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದೆ.

**ಸಮಾಜ ಸೇವಾ ಸಮಿತಿ:** ವಿವಿಧ ರೀತಿಯ ಕೌಶಲ ತರಬೇತಿ ನೀಡಿ ಅಸಹಾಯಕ ಮಹಿಳೆಯರು ಸ್ವಾವಲಂಬಿಗಳಾಗಿ ಸಮಾಜದಲ್ಲಿ ಗೌರವನೀಯವಾಗಿ ಬಾಳ್ವೆ ನಡೆಸುವಂತೆ ಮಾಡುವ ಕಾರ್ಯದಲ್ಲಿ ನಿರತವಾಗಿದೆ.

## ನಾವೇನು ಮಾಡಬಹುದು?

- ಸ್ತ್ರೀಸಂವೇದನೆಯನ್ನು ಅರಿತು ಗೌರವಿಸುವುದು. ನಮ್ಮ ಸ್ನೇಹಿತರು, ಬಂಧುಗಳು, ನೆರೆಹೊರೆಯಲ್ಲಿ ಮಹಿಳೆಯರನ್ನು ಗೌರವಪೂರ್ಣವಾಗಿ ನಡೆಸಿಕೊಳ್ಳುವಂತೆ ಗಮನವಹಿಸುವುದು.
- ರಾಷ್ಟ ಸೇವಿಕಾ ಸಮಿತಿ, ಅಭಾವಿಪ, ಸಮಾಜ ಸೇವಾ ಸಮಿತಿಯಂತಹ ಸಂಘಟನೆಗಳು ನಡೆಸುತ್ತಿರುವ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು.
- ಮಹಿಳಾ ಸುರಕ್ಷೆ, ಭದ್ರತೆ, ಹೋರಾಟಗಳಲ್ಲಿ ಸ್ವಯಂಸೇವಕರಾಗಿ ಸೇರಿಕೊಳ್ಳುವುದು; ಸಮಾನ ಮನಸ್ಕ ಕಾರ್ಯಕರ್ತರನ್ನು ಸಂಘಟಿಸುವುದು.
- ಮಹಿಳೆಯರಿಗೆ ಸ್ವರಕ್ಷಣೆಯ ತರಬೇತಿ ನೀಡುವುದು, ಅಸಹಾಯಕ ಹಾಗೂ ಸಂಕಷ್ಟದಲ್ಲಿರುವ ಮಹಿಳೆಯರಲ್ಲಿ ಆತ್ಮವಿಶ್ವಾಸ ತುಂಬುವುದು.
- ಸ್ತ್ರೀ ಸುರಕ್ಷೆಯ ಕುರಿತು ವಿಚಾರ ಸಂಕಿರಣ, ಸಾರ್ವಜನಿಕ ಸಂವಾದಗಳನ್ನು ಏರ್ಪಡಿಸುವುದು.
- ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳ ಮೂಲಕ ಮಹಿಳಾ ಸುರಕ್ಷೆಯ ವಿಷಯಗಳಲ್ಲಿ ಜನಜಾಗೃತಿ ಮೂಡಿಸುವುದು.

**ಸಂಪರ್ಕ**

**ರಾಷ್ಟ್ರ ಸೇವಿಕಾ ಸಮಿತಿ :** ಪರಿಮಳಾಮೂರ್ತಿ, 99809 00075
ಎ.ಬಿ.ವಿ.ಪಿ. : ಡಾ. ಶ್ರೀನಿವಾಸ ಬಳ್ಳಿ, 94487 59427
**ಸಮಾಜ ಸೇವಾ ಸಮಿತಿ:** ಶೋಭಾ, 94489 45367

## ಅಬಲಾಶ್ರಮ

**ಅಬಲಾಶ್ರಮವು ಅನಾಥ ಮತ್ತು ನಿರಾಶ್ರಿತ ಮಹಿಳೆ ಮತ್ತು ಹೆಣ್ಣು ಮಕ್ಕಳಿಗೆ ಪುನರ್ವಸತಿ ಯೋಜನಾ ಕೇಂದ್ರವಾಗಿದ್ದು ಸದ್ಯ ಬೆಂಗಳೂರಿನಲ್ಲಿ 70 ಮಹಿಳೆಯರು ಆಶ್ರಯ ಪಡೆದಿದ್ದಾರೆ.**

### ಚಟುವಟಿಕೆಗಳು

- 10,000ಕ್ಕೂ ಹೆಚ್ಚು ಅನಾಥ ಹೆಣ್ಣುಮಕ್ಕಳು ಮತ್ತು ನಿರಾಶ್ರಿತ ಮಹಿಳೆಯರಿಗೆ ವಸತಿ, ಶಿಕ್ಷಣ ಮತ್ತು ತರಬೇತಿ ನೀಡುವುದು
- 16ನೇ ವಯಸ್ಸಿಗೆ ಮೇಲ್ಪಟ್ಟ ಹೆಣ್ಣು ಮಕ್ಕಳು/ಮಹಿಳೆಯರಿಗೆ ಶಿಕ್ಷಣ ಮತ್ತು ಔದ್ಯೋಗಿಕ ತರಬೇತಿ ನೀಡುವುದು
- ಫ್ಯಾಷನ್ ಡಿಸೈನ್, ಬ್ಯೂಟಿ ಪಾರ್ಲರ್, ಅಡುಗೆ, ಫೋಟೋಗ್ರಫಿ ವಿಷಯಗಳಲ್ಲಿ ತರಬೇತಿ
- ಕೌಟುಂಬಿಕ ಸಲಹೆ ಮತ್ತು ಕೌನ್ಸಲಿಂಗ್
- ಅಸಹಾಯಕ ಹೆಣ್ಣುಮಕ್ಕಳ ವಿವಾಹ ಮಾಡಿ ಸಾಂಸಾರಿಕ ಜೀವನ ನಡೆಸಲು ಸಹಾಯ ಮಾಡಲಾಗಿದೆ
- ಅಬಲಾಶ್ರಮವನ್ನು ಆಶ್ರಯಿಸಿದ್ದ ಹಲವಾರು ಮಹಿಳೆಯರು ಇದೇ ರೀತಿಯ ಆಶ್ರಮಗಳನ್ನು ತೆರೆದಿದ್ದಾರೆ

### ನಾವು ಹೇಗೆ ಸಹಾಯ ಮಾಡಬಹುದು?

- 16ನೇ ವಯಸ್ಸಿಗೆ ಮೇಲ್ಪಟ್ಟ ವಂಚಿತ ಹೆಣ್ಣು ಮಕ್ಕಳನ್ನು ಪಾರುಮಾಡಿ ಪುನರ್ವಸತಿ ನಿರ್ಮಿಸುವುದು
- ಉಚಿತ ಔದ್ಯೋಗಿಕ ತರಬೇತಿ ಮತ್ತು ಜೀವನ ಕೌಶಲಗಳ ತರಬೇತಿ ನೀಡುವುದು
- ಶಿಕ್ಷಣದ ಮುಂದುವರಿಕೆಯಲ್ಲಿ ಸಹಾಯ
- ವಸತಿ ನಿಲಯದ ಹೆಣ್ಣು ಮಕ್ಕಳಿಗೆ ಆರೋಗ್ಯ ಮತ್ತು ವ್ಯಕ್ತಿತ್ವ ವಿಕಸನದ ಸಲಹೆ ನಿಡುವುದು
- ಆರ್ಥಿಕ ಸಹಾಯ, ಸಂಪನ್ಮೂಲ ಕ್ರೋಡೀಕರಣದಲ್ಲಿ ಸಹಕಾರ
- ಮಹಿಳೆಯರು ತಯಾರಿಸುವ ಗೃಹ ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವುದು.

**ಸಂಪರ್ಕ ಮಾಹಿತಿ**

ದೂರವಾಣಿ: 94833 34329, 94491 06410, 080–2667 8694
ಈ–ಮೈಲ್: abalashrama@yahoo.com
www.abalashrama.org

*1ನೇ ಪುಟದಿಂದ*

# ಸಿಕ್ಕಿದೆ ಸ್ವಾತಂತ್ರ್ಯ – ದಕ್ಕಿಸಿಕೊಳ್ಳೋಣ

ಅಂಶಗಳು. ಪ್ರಕೃತಿಯಿರುವುದೇ ನಮ್ಮ ಉಪಯೋಗಕ್ಕಾಗಿ ಎಂಬುದು ನಮ್ಮ ಆದರ್ಶವಲ್ಲ. ನಾವೂ ಪ್ರಕೃತಿಯ ಭಾಗ, ಇತರ ಜೀವಜಂತುಗಳಿಗೂ ಅದರಲ್ಲಿ ಹಕ್ಕಿದೆ, ಆದಷ್ಟು ಕಡಿಮೆ ಸಂಪನ್ಮೂಲಗಳನ್ನು ಉಪಯೋಗಿಸಿ ಪ್ರಕೃತಿಗೆ ಧಕ್ಕೆಯಾಗದಂತೆ ಬದುಕುವುದೇ ನಮ್ಮ ಆದರ್ಶ. ಅದನ್ನು ರಕ್ಷಿಸಿ ಮುಂದಿನ ಪೀಳಿಗೆಗೆ ಸುರಕ್ಷಿತವಾಗಿ ಹಸ್ತಾಂತರಿಸಿದಲ್ಲಿ ಮಾತ್ರ ನಮ್ಮ ದೇಶಕ್ಕೆ ಉತ್ತಮ ಭವಿಷ್ಯ. ಸಾವಿರಾರು ವರ್ಷಗಳಿಂದ ಶೇಖರಗೊಂಡ ಅಂತರ್ಜಲವನ್ನು ಒಮ್ಮಲೇ ಮೊಗೆದು ಕುಡಿದಲ್ಲಿ ನಾವು ಬದುಕಬಹುದು. ಆದರೆ, ನಮ್ಮ ಮಕ್ಕಳು ಮೊಮ್ಮಕ್ಕಳು ಬದುಕಿಯಾರೇ ಎನ್ನುವುದು ಪ್ರಶ್ನೆ!

- ವೈಜ್ಞಾನಿಕ ದೃಷ್ಟಿಯನ್ನು ಬೆಳೆಸಿಕೊಳ್ಳುವುದು, ಏನನ್ನು ಮಾಡಿದರೂ ಏಕೆ ಮಾಡುತ್ತಿದ್ದೇವೆ ಎನ್ನುವುದನ್ನು ತಿಳಿದು ಮಾಡುವುದು ಬುದ್ಧಿವಂತರ ಲಕ್ಷಣ. ಕಂದಾಚಾರಗಳನ್ನು ಪಾಲಿಸುತ್ತಾ, ತಾನು ತೊಂದರೆಗೊಳಗಾಗುವುದಲ್ಲದೇ, ತನ್ನ ಸುತ್ತಮುತ್ತಲಿನವರಿಗೂ ಉಪದ್ರವ ಕೊಡುವ ಅನೇಕರನ್ನು ನಾವು ನೋಡುತ್ತೇವೆ. ಒಂದು ಒಳ್ಳೆಯ ಸಮಾಜ ನಿರ್ಮಾಣಕ್ಕೆ ವೈಚಾರಿಕತೆಯುಳ್ಳ, ವೈಜ್ಞಾನಿಕ ದೃಷ್ಟಿಕೋನವುಳ್ಳ ವ್ಯಕ್ತಿಗಳು ಅಗತ್ಯ. ಇದನ್ನು ನಮ್ಮ ಸಂವಿಧಾನ ಪ್ರತಿಯೊಬ್ಬರಿಂದಲೂ ಅಪೇಕ್ಷಿಸುತ್ತದೆ.
- ಸಾರ್ವಜನಿಕ ಆಸ್ತಿಪಾಸ್ತಿಗಳ ರಕ್ಷಣೆ ಎಲ್ಲರ ಹೊಣೆ. ಸರ್ಕಾರದ ಬಳಿ ಅದರ ಒಡೆತನವಿದ್ದರೂ ಅದರ ರಕ್ಷಣೆ ಮಾಡುವುದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ. ನಮ್ಮೆಲ್ಲರ ಜವಾಬ್ದಾರಿಯೂ ಹೌದು. ಪ್ರತಿಭಟನೆ–ಬಂದ್‌ಗಳ ಸಂದರ್ಭದಲ್ಲಿ ಯಾರದ್ದೋ ಮೇಲಿನ ಸಿಟ್ಟಿಗೆ ಸುಲಭವಾಗಿ ಬಲಿಯಾಗುವುದು ಸರ್ಕಾರಿ ವಾಹನಗಳು, ಕಟ್ಟಡಗಳು. ಆದರೆ, ಇದರಿಂದ ನಷ್ಟ ಯಾರಿಗೆ? ಸರ್ಕಾರಕ್ಕೆ ನಷ್ಟವಾದರೆ, ನಮಗೇ ನಷ್ಟವಾದಂತೆಯೇ ಸರಿ.
- ವೈಯಕ್ತಿಕವಾಗಿ ಮತ್ತು ಒಂದು ಸಮಾಜವಾಗಿ ನಾವು ಮಾಡುವ ಎಲ್ಲ ಕೆಲಸದಲ್ಲೂ ಉತ್ತಮ ದಕ್ಷತೆಯನ್ನು ಅಳವಡಿಸಿಕೊಳ್ಳುವುದು ನಮ್ಮ ಸಂವಿಧಾನ ನಮಗೆ ವಿಧಿಸಿರುವ ಕರ್ತವ್ಯ. ನಮ್ಮ ಉದ್ಯೋಗ ಸ್ವಂತದ್ದಿರಬಹುದು, ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿರಬಹುದು. ಎಲ್ಲೇ ಇರಲಿ, ಯಾವುದೇ ಕೆಲಸ ಮಾಡಲಿ ಅದರಲ್ಲಿ ನೂರು ಶೇಕಡಾ ಶ್ರಮವಿರಲಿ, ಪ್ರಾಮಾಣಿಕತೆಯಿರಲಿ. ಇದರಿಂದ ಒಂದು ಸಮಾಜವಾಗಿ ನಮ್ಮ ಉತ್ಪಾದನೆ ಹೆಚ್ಚುತ್ತದೆ. ನಮ್ಮ ಸಂಪತ್ತು ಹೆಚ್ಚುತ್ತದೆ. ಸೋಮಾರಿತನದಿಂದ ನಮಗೂ ನಷ್ಟ, ದೇಶಕ್ಕೂ ನಷ್ಟ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವತ್ತ, ಹೆಚ್ಚು ಹೆಚ್ಚು ದುಡಿಯುವತ್ತ ಗಮನ ಹರಿಸಿದರೆ, ದೇಶದ ಅಭಿವೃದ್ಧಿ ತಾನಾಗಿಯೇ ಆಗುತ್ತದೆ. ಶ್ರಮಕ್ಕೆ ಸೋಲಿಲ್ಲ, ಸೋಮಾರಿಗೆ ಜಯವಿಲ್ಲ!

ನಮ್ಮ ಹಕ್ಕುಗಳ ಬಗೆಗಿನ ಕೂಗು ಯಾವಾಗಲೂ ನಮಗೆ ಕೇಳುತ್ತಲೇ ಇರುತ್ತದೆ. ಕರ್ತವ್ಯದ ಬಗ್ಗೆಯೂ ಯೋಚಿಸುವುದು ಈ ಬಾರಿಯ ಸ್ವಾತಂತ್ರ್ಯ ದಿನದ ಸಂದೇಶವಾಗಲಿ. ಗಾಂಧಿ, ಸುಭಾಷ್, ಭಗತ್ ಸಿಂಗ್‌ರನ್ನು ಹೊಗಳುವುದಕ್ಕಷ್ಟೇ ಸೀಮಿತವಾಗದೇ, ನಮಗಿಂದು ಸಿಕ್ಕಿರುವ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳುವತ್ತಲೂ ನಮ್ಮ ಪ್ರಯತ್ನ ಶುರುವಾಗಲಿ. ನಮ್ಮ ಮನೆಯ ಕಸದ ನಿರ್ವಹಣೆಯನ್ನು ನಗರಪಾಲಿಕೆಗೆ ಬಿಟ್ಟು ಅದು ಸರಿಯಾಗದಿದ್ದಾಗ ಅವರನ್ನು ಬಯ್ಯುವುದಕ್ಕೆ ಯಾವ ಪ್ರಯತ್ನವೂ ಬೇಡ. ಆದರೆ, ನಮ್ಮ ಮನೆಯಲ್ಲೇ ಹಸಿ ಕಸದಿಂದ ಗೊಬ್ಬರ ತಯಾರು ಮಾಡುವುದಕ್ಕೆ ಬರೀ ಮಾತು ಸಾಲದು, ಸ್ವಲ್ಪ ಪ್ರಯತ್ನ ಬೇಕು! ರಸ್ತೆ ಹಾಳಾಗುವುದಕ್ಕೆ ಸರ್ಕಾರವನ್ನು ದೂಷಿಸುವುದು ಸುಲಭ. ಆದರೆ, ಮಳೆಯ ನೀರು ರಸ್ತೆಯ ಮೇಲೆ ಹರಿದು ರಸ್ತೆ ಹಾಳಾಗುವುದನ್ನು ತಪ್ಪಿಸಲು ಸ್ವಲ್ಪ ಪ್ರಯತ್ನ ಬೇಕು. ಕಾಡಿಲ್ಲ, ಮಳೆಯಿಲ್ಲ, ನೀರಿಲ್ಲ, ಮೇವಿಲ್ಲ, ವಿಪರೀತ ಸೆಖೆ ಎಂದು ಗೊಣಗುವುದು ಸುಲಭ. ಗಿಡ ನೆಡಲು, ಅದನ್ನು ಪೋಷಿಸಿ ಮರವಾಗಿಸಲು, ಮಳೆ ನೀರಿಂಗಿಸಿ ಕೊಳವೆ ಬಾವಿಯಲ್ಲಿ ಮತ್ತೆ ನೀರು ಬರುವಂತೆ ಮಾಡಲು ಸ್ವಲ್ಪ ಪ್ರಯತ್ನ ಬೇಕು.

ಈ ಸ್ವಾತಂತ್ರ್ಯ ದಿನ ಅಂತಹ ಕೆಲಸಗಳನ್ನು ಕೈಗೆತ್ತಿಕೊಳ್ಳಲು, ಪ್ರಜೆಗಳಾಗಿ ನಮ್ಮ ಕರ್ತವ್ಯಗಳನ್ನು ಪಾಲಿಸಲು ನಮಗೆಲ್ಲ ಪ್ರೇರಣೆ ನೀಡಲಿ.

**ಸಂಪಾದಕೀಯ ಸಹಕಾರ** ಶ್ರೀವತ್ಸ, ಸತ್ಯನಾರಾಯಣ ಶಾನಭಾಗ್, ಪ್ರವೀಣ್ ಪಟವರ್ಧನ್, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

# ಸಾಲುದ್ದದ ಸುದ್ದಿಗಳು

12 ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳವು ಈ ಬಾರಿ ಮಹಾರಾಷ್ಟ್ರದ ನಾಸಿಕ್‌ನ ಗೋದಾವರಿ ನದಿತೀರದ ತ್ರಯಂಬಕೇಶ್ವರ ಕ್ಷೇತ್ರದಲ್ಲಿ ಜುಲೈ 14ರಂದು ಆರಂಭವಾಗಿದ್ದು, ಆಗಸ್ಟ್ 11ರ ವರೆಗೆ ನಡೆಯಲಿದೆ. ಮೇಳದ ಪ್ರಮುಖ ಆಕರ್ಷಣೆಯಾದ 'ಶಾಹಿ' ಸ್ನಾನ ಆಗಸ್ಟ್ 29ರಂದು ನಡೆಯಲಿದ್ದು, ಎರಡನೇ ಮತ್ತು ಬೃಹತ್ ಮಟ್ಟದ ಶಾಹಿ ಸ್ನಾನ ಸೆ. 13ಕ್ಕೆ ಹಾಗೂ ಮೂರನೇ ಶಾಹಿ ಸ್ನಾನ ಸೆ. 18ರಂದು ನಡೆಯಲಿದೆ. ಕುಂಭಮೇಳದಲ್ಲಿ ಸುಮಾರು 4ಕೋಟಿ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆಯಿದ್ದು, ಭದ್ರತಾ ವ್ಯವಸ್ಥೆಯ ಭಾಗವಾಗಿ ಉನ್ನತ ಮಟ್ಟದ ನಿಯಂತ್ರಣ ಕೊಠಡಿ, ಭಕ್ತರ ಅನುಕೂಲಕ್ಕಾಗಿ ಹೆಚ್ಚುವರಿ ರೈಲ್ವೆ ಪ್ಲಾಟ್‌ಫಾರಂ ನಿರ್ಮಾಣ ಮಾಡಲಾಗಿದೆ. ಕುಂಭಮೇಳದ ತಯಾರಿಗಾಗಿ ಕೇಂದ್ರ ಸರ್ಕಾರ, ಮಹಾರಾಷ್ಟ್ರ ಸರ್ಕಾರ, ನಾಸಿಕ್ ಹಾಗೂ ತ್ರಯಂಬಕೇಶ್ವರ ನಗರಸಭೆಗಳು ಒಟ್ಟು 2,300 ರೂ. ಕೋಟಿ ಖರ್ಚು ಮಾಡಿದೆ.



- 245 ಜನ ಬಂಗ್ಲಾದೇಶಿ ಪ್ರಜೆಗಳು ರಾಜ್ಯದಲ್ಲಿ ಅಕ್ರಮವಾಗಿ ವಾಸಿಸುತ್ತಿದ್ದಾರೆ ಎಂದು ಗೃಹ ಸಚಿವ ಕೆ.ಜೆ. ಜಾರ್ಜ್ ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ. ಅಕ್ರಮ ವಲಸಿಗರ ವಿರುದ್ಧ 2008 ರಿಂದ ಇದುವರೆಗೆ 62 ಪ್ರಕರಣಗಳು ದಾಖಲಾಗಿವೆ ಎಂದು ಅವರು ಶಾಸಕರೋರ್ವರ ಪ್ರಶ್ನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಅಕ್ರಮ ವಲಸಿಗರನ್ನು ಪತ್ತೆ ಮಾಡಿ, ಕಾನೂನು ಕ್ರಮ ಜರುಗಿಸಲು ಪ್ರತಿ ನಗರ ಮತ್ತು ಜಿಲ್ಲಾ ಮಟ್ಟದಲ್ಲಿ ವಿಶೇಷ ಕಾರ್ಯಪಡೆ ರಚಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.




- **ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಬ್ರಿಟನ್‌ನ ಐದು ಉಪಗ್ರಹಗಳನ್ನು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ ಮಾಡಿದೆ. ಐದು ಉಪಗ್ರಹಗಳ ತೂಕ ಸುಮಾರು 1,440 ಕೆ.ಜಿ. ಇದ್ದು, ಇದು ಇಸ್ರೊದ ಈವರೆಗಿನ ಅತಿ ತೂಕದ ವಾಣಿಜ್ಯ ಉಡಾವಣೆಯಾಗಿದೆ. ಐದು ಬ್ರಿಟನ್ ಉಪಗ್ರಹಗಳಲ್ಲಿ ಡಿಎಂಸಿ3 ಹೆಸರಿನ ಮೂರು ಉಪಗ್ರಹಗಳಿದ್ದು, 447 ಕಿಲೋ ತೂಕವಿದೆ. ಇನ್ನುಳಿದವುಗಳಲ್ಲಿ ಸಿಬಿಎನ್‌ಟಿ 191 ಕಿಲೋ ತೂಕವಿದ್ದು, ಡಿ–ಆರ್ಬಿಟ್ 7 ಕಿಲೋ ತೂಕವಿದೆ. ಮೂರು ಡಿಎಂಸಿ3 ಮತ್ತು ಸಿಬಿಎನ್‌ಟಿ 1 ಉಪಗ್ರಹಗಳನ್ನು ಸರ್ರೆ ಉಪಗ್ರಹ ತಂತ್ರಜ್ಞಾನ ಸಂಸ್ಥೆ ನಿರ್ಮಿಸಿದೆ. ಪಿಎಸ್‌ಎಲ್‌ವಿ ಸಿ28 ರಾಕೆಟ್ 44.4 ಮೀಟರ್ ಎತ್ತರವಿದ್ದು, 320 ಟನ್ ತೂಕವಿದೆ. ನಾಲ್ಕು ಹಂತಗಳ ಎಂಜಿನ್ ಒಳಗೊಂಡಿದೆ. ಭೂಮಿಯ ಪರಿಸರ, ಪ್ರಕೃತಿ ವಿಕೋಪ, ನಗರ ಮೂಲಸೌಕರ್ಯಗಳ ಬಗ್ಗೆ ಈ ಉಪಗ್ರಹಗಳು ಪ್ರತಿನಿತ್ಯ ಮಾಹಿತಿ ನೀಡಲಿವೆ. ಬ್ರಿಟನ್‌ನ ಈ ಐದು ಉಪಗ್ರಹಗಳೂ ಸೇರಿದಂತೆ 1999ರಿಂದ ಈವರೆಗೆ ಭಾರತ ಬೇರೆಬೇರೆ ದೇಶಗಳ 45 ಉಪಗ್ರಹಗಳನ್ನು ಉಡಾವಣೆ ಮಾಡಿದೆ.**

- ಪ್ರಸಿದ್ಧ ಪ್ರವಾಸಿ ಹಾಗೂ ಯಾತ್ರಾಸ್ಥಳ ಸೇರಿದಂತೆ ಮೆಟ್ರೊ ಮತ್ತು ಪ್ರಮುಖ ನಗರಗಳ 400 ರೈಲು ನಿಲ್ದಾಣಗಳ ಅಭಿವೃದ್ಧಿ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಹಸಿರು ನಿಶಾನೆ ತೋರಿಸಿದೆ.

- **ತುಂಬಾ ಹಳೆಯದಾದ 295 ನಿರರ್ಥಕ ಕಾಯ್ದೆಗಳನ್ನು ರದ್ದುಗೊಳಿಸುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. 1950ರಿಂದ 2001ರವರೆಗೆ ಒಟ್ಟು ಇಂತಹ ನೂರು ನಿರರ್ಥಕ ಕಾಯ್ದೆಗಳನ್ನು ರದ್ದುಪಡಿಸಲಾಗಿದೆ. ಪ್ರಸ್ತುತ ಮೋದಿ ಸರ್ಕಾರ ರೈಲ್ವೆ ಇಲಾಖೆಯ ಕಾಯ್ದೆ ಸೇರಿದಂತೆ ಒಟ್ಟು 758 ಹಳೆಯ ಕಾಯ್ದೆ ರದ್ದತಿ ಮತ್ತು ತಿದ್ದುಪಡಿ ಮಸೂದೆಯನ್ನು ಇತ್ತೀಚೆಗೆ ಸಂಸತ್‌ನಲ್ಲಿ ಮಂಡಿಸಿತ್ತು.**

- 'ಸ್ಕಿಲ್ ಇಂಡಿಯಾ' (ಕೌಶಲ ಭಾರತ) ಅಭಿಯಾನದಡಿ ಪ್ರಸಕ್ತ ಹಣಕಾಸು ವರ್ಷದಲ್ಲಿಯೇ 1.20 ಕೋಟಿ ಯುವಜನರಿಗೆ ಕೌಶಲ ಅಭಿವೃದ್ಧಿ ತರಬೇತಿ ನೀಡಿ ಉದ್ಯೋಗಕ್ಕೆ ಅರ್ಹರನ್ನಾಗಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಇದರಲ್ಲಿ ಶೇ. 60ರಷ್ಟು ಕೌಶಲ ತರಬೇತಿ ಚಟುವಟಿಕೆಯನ್ನು ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದಡಿ ನಿರ್ವಹಿಸುತ್ತದೆ. ಉಳಿದ ಶೇ 40ರಷ್ಟು ತರಬೇತಿ ಕಾರ್ಯಕ್ರಮವನ್ನು 20 ವಿವಿಧ ಸಚಿವಾಲಯಗಳ ಅಧೀನ ಸಂಸ್ಥೆಗಳು ನೆರವೇರಿಸಲಿವೆ. ಪ್ರಧಾನಮಂತ್ರಿ ಕೌಶಲ ವಿಕಾಸ ಯೋಜನೆಯಡಿ 24 ಲಕ್ಷ ಯುವಜನರಿಗೆ ತರಬೇತಿ ನೀಡುವ ಗುರಿ ಇದೆ. ಇವರೂ ಸೇರಿದಂತೆ ಒಟ್ಟು 1.20 ಕೋಟಿ ಮಂದಿಗೆ ಮುಂದಿನ ಎಂಟೂವರೆ ತಿಂಗಳಲ್ಲಿ ಕೌಶಲ ತರಬೇತಿ ನೀಡಲಾಗುವುದು ಎಂದು ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ಪ್ರಕಟಣೆ ತಿಳಿಸಿದೆ. 2022ರೊಳಗಾಗಿ ಒಟ್ಟು 40.02 ಕೋಟಿ ಯುವಜನರಿಗೆ ಕೌಶಲ ಅಭಿವೃದ್ಧಿ ತರಬೇತಿ ನೀಡಿ, ಅವರನ್ನು ಉದ್ಯೋಗಕ್ಕೆ ಅರ್ಹರನ್ನಾಗಿಸುವುದು ಇಲ್ಲವೇ, ಸ್ವ ಉದ್ಯೋಗ ಕೈಗೊಳ್ಳಲು ಉತ್ತೇಜಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.

- ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಇದೇ ಮೊದಲ ಬಾರಿಗೆ ಯುದ್ಧವಿಮಾನ ತಂತ್ರಜ್ಞಾನವನ್ನು ಖಾಸಗಿ ಸಂಸ್ಥೆಗೆ ನೀಡಿದೆ. ಈ ಬಗ್ಗೆ ಖಾಸಗಿ ಮಿಲಿಟರಿ ಉಪಕರಣ ಉತ್ಪಾದನಾ ಸಂಸ್ಥೆಯಾದ ಲಾರ್ಸನ್ ಆ್ಯಂಡ್ ಟೊಬ್ರೊ (ಎಲ್ ಆ್ಯಂಡ್ ಟಿ) ಜತೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಪೈಲಟ್ ರಹಿತ ಲಕ್ಷ ಯುದ್ಧವಿಮಾನಗಳ ವಾಣಿಜ್ಯಾತ್ಮಕ ಉತ್ಪಾದನೆಗೂ ಅವಕಾಶ ನೀಡಲಾಗಿದೆ. ಈ ಬಗ್ಗೆ ರಕ್ಷಣಾ ಸಚಿವಾಲಯಕ್ಕೆ ಡಿಆರ್‌ಡಿಒ ಪ್ರಸ್ತಾವನೆ ಸಲ್ಲಿಸಿದ್ದು, ಸಚಿವಾಲಯ ಸಮ್ಮತಿ ನೀಡಿದೆ. ಈ ಯುದ್ಧವಿಮಾನ ಪೂರೈಸುವಂತೆ ಸಿಂಗಾಪುರ, ಮಲೇಷ್ಯಾ, ಇಸ್ರೇಲ್ ಮತ್ತಿತರ ದೇಶಗಳ ಸೇನೆಯಿಂದ ಕೋರಿಕೆ ಬಂದಿರುವ ಹಿನ್ನೆಲೆಯಲ್ಲಿ ನಿರ್ಮಾಣದ ಹೊಣೆಯನ್ನು ಖಾಸಗಿ ಸಂಸ್ಥೆಗೆ ನೀಡಲಾಗಿದೆ. ಇವುಗಳನ್ನು ನಿರ್ಮಿಸುವ ಎಲ್ ಆ್ಯಂಡ್ ಟಿ, ಮಾರಾಟವಾಗುವ ಯುದ್ಧವಿಮಾನಕ್ಕೆ ಅನುಗುಣವಾಗಿ ಡಿಆರ್‌ಡಿಒಗೆ ರಾಯಧನ ನೀಡಲಿದೆ. ಆದರೆ, ವಿದೇಶಗಳಿಗೆ ಇವುಗಳನ್ನು ಮಾರಾಟ ಮಾಡುವ ಮುನ್ನ ರಕ್ಷಣಾ ಸಚಿವಾಲಯದ ಅನುಮತಿ ಪಡೆದುಕೊಳ್ಳುವುದು ಕಡ್ಡಾಯ. ಲಕ್ಷ ಯುದ್ಧವಿಮಾನದ ತಂತ್ರಜ್ಞಾನವಾದ ಸಬ್‌ಸಾನಿಕ್ ಏರಿಯಲ್ ಟಾರ್ಗೆಟ್ ಸಿಸ್ಟಂ ಅನ್ನು ಬೆಂಗಳೂರಿನಲ್ಲಿರುವ ಡಿಆರ್‌ಡಿಒ ಘಟಕ ಅಭಿವೃದ್ಧಿಪಡಿಸಿದೆ. ಅನಿಲ ಟರ್ಬೈನ್ ಇಂಜಿನ್ ಒಳಗೊಂಡಿರುವ ಈ ಯುದ್ಧವಿಮಾನ ಭೂಪ್ರದೇಶ ಹಾಗೂ ಹಡಗಿನ ಮೇಲಿಂದ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಈ ಯುದ್ಧವಿಮಾನವನ್ನು 2000ದಿಂದ 2003ರ ನಡುವೆ ದೇಶದ ಮೂರೂ ಸೇನಾಪಡೆಗಳಿಗೆ ಸೇರ್ಪಡೆಗೊಳಿಸಲಾಗಿದೆ.



- **ದೇಶಾದ್ಯಂತ ಎಲ್ಲರಿಗೂ ಕಡಿಮೆ ಬೆಲೆಗೆ ಔಷಧಗಳು ದೊರೆಯುವಂತೆ ಮಾಡುವ ನಿಟ್ಟಿನಲ್ಲಿ ಮಹತ್ವದ ಕ್ರಮ ಕೈಗೊಂಡಿರುವ ಕೇಂದ್ರ ಸರ್ಕಾರ 39 ಔಷಧಗಳನ್ನು ದರ ನಿಯಂತ್ರಣ ಪಟ್ಟಿಗೆ ಸೇರ್ಪಡೆಗೊಳಿಸಿದೆ. ಮಧುಮೇಹ, ಜೀರ್ಣ ಸಂಬಂಧಿ ಸಮಸ್ಯೆಗಳು ಮತ್ತಿತರ ಹಲವು ರೋಗಗಳ ಔಷಧಗಳನ್ನು ದರ ನಿಯಂತ್ರಣ ವ್ಯಾಪ್ತಿಯಡಿ ತರಲಾಗಿದೆ. ರಾಷ್ಟ್ರೀಯ ಔಷಧ ದರ ನಿಯಂತ್ರಣ ಪ್ರಾಧಿಕಾರ (ಎನ್‌ಪಿಪಿಎ) ಈ ಕುರಿತು ಅಧಿಸೂಚನೆ ಹೊರಡಿಸಿದೆ. ಕೇಂದ್ರ ಸರ್ಕಾರ 500 ಔಷಧಗಳನ್ನು ದರ ನಿಯಂತ್ರಣ ವ್ಯಾಪ್ತಿಯಡಿ ತರುವುದಾಗಿ ಘೋಷಿಸಿತ್ತು. ಇದರ ಅಂಗವಾಗಿ ಮಧುಮೇಹ, ಆಸ್ತಮಾ, ಕ್ಷಯಾ ಮತ್ತಿತರ ರೋಗಗಳ ಚಿಕಿತ್ಸೆಗೆ ಬಳಸುವ 30 ಔಷಧಗಳನ್ನು ಎನ್‌ಪಿಪಿಎ ಕಳೆದ ಮೇ ತಿಂಗಳಲ್ಲಿ ದರ ನಿಯಂತ್ರಣ ಪಟ್ಟಿಗೆ ಸೇರ್ಪಡೆಗೊಳಿಸಿದೆ.**



- ಭಾರತೀಯ ಸೇನೆಯಲ್ಲಿ ಅತ್ಯಾಧುನಿಕ ಉಪಕರಣಗಳ ಕೊರತೆ ಇರುವುದನ್ನು ಮನಗಂಡಿರುವ ಕೇಂದ್ರ ಸರ್ಕಾರ 30ಸಾವಿರ ಕೋಟಿ ರೂ. ಮೌಲ್ಯದ ಶಸ್ತ್ರಾಸ್ತ್ರಗಳನ್ನು ಖರೀದಿಸಲು ಒಪ್ಪಿಗೆ ಸೂಚಿಸಿದೆ. ಇವುಗಳನ್ನು 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮದ ಅಡಿಯಲ್ಲೇ ನಿರ್ಮಾಣ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಭಾರತೀಯ ಕಂಪನಿಗಳಿಂದಲೇ ಶಸ್ತ್ರಾಸ್ತ್ರ ಖರೀದಿಸಲಾಗುವುದು ಎಂದು ತಿಳಿಸಿದೆ. ಸುಮಾರು 16,900 ಕೋಟಿ ರೂ. ಮೌಲ್ಯದ 428 ಡಿಎಎನ್ ಏರ್‌ಕ್ರಾಫ್ಟ್ ಗನ್‌ಗಳನ್ನು ಖರೀದಿಸಲು ನಿರ್ಧರಿಸಲಾಗಿದೆ. ಆದರೆ ಸದ್ಯ ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವ ಕಂಪನಿಗಳು ಕೂಡಾ ಇಂತಹ ಗನ್‌ಗಳನ್ನು ತಯಾರಿಸುತ್ತಿಲ್ಲ. ಪ್ರಸ್ತುತ ಸೇನೆಯಲ್ಲಿ ಎಲ್–70 ಮತ್ತು ಝು–23 ಎಂಎಂ ಗನ್‌ಗಳನ್ನು ಬಳಸಲಾಗುತ್ತಿದ್ದು, ಇವುಗಳನ್ನು 1950ರ ದಶಕದಲ್ಲಿ ಸ್ವೀಡನ್‌ನ ಬೋಫೋರ್ಸ್ ಸಂಸ್ಥೆಯಿಂದ ಖರೀದಿಸಲಾಗಿತ್ತು.



- **ಶಾಲೆಗಳಲ್ಲಿ ಶೌಚಗೃಹ ನಿರ್ವಣಕ್ಕೆ ಸಂಬಂಧಿಸಿ ನಿರೀಕ್ಷಿತ ಗುರಿ ಮುಟ್ಟದಿರುವ ಹಿನ್ನೆಲೆಯಲ್ಲಿ ನಿರ್ದೇಶಕ ಹಾಗೂ ಉಪ ಕಾರ್ಯದರ್ಶಿ ಮಟ್ಟದ 300 ಮಂದಿ ಅಧಿಕಾರಿಗಳನ್ನು ರಾಜ್ಯಗಳಿಗೆ ಕಳುಹಿಸಲಾಗಿದ್ದು, ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಕೇಂದ್ರ ಸರ್ಕಾರ ಆದೇಶಿಸಿದೆ. ಪ್ರತಿ ಅಧಿಕಾರಿಯೂ ನಗರ ಮಟ್ಟದಲ್ಲಿ 15 ಹಾಗೂ ಗ್ರಾಮೀಣ ಮಟ್ಟದಲ್ಲಿ 10 ಶಾಲೆಗಳಿಗೆ ಭೇಟಿ ನೀಡಿ, ಶೌಚಗೃಹ ನಿರ್ಮಾಣದ ನೈಜ ಚಿತ್ರಣ, ಬಾಲಕ–ಬಾಲಕಿಯರ ಪ್ರತ್ಯೇಕ ಶೌಚಗೃಹ, ನೀರಿನ ವ್ಯವಸ್ಥೆ ಹಾಗೂ ಅದರ ಬಳಕೆ ಕುರಿತಂತೆ ವಾರದ ಒಳಗಾಗಿ ವರದಿ ಸಲ್ಲಿಸುವಂತೆ ಸೂಚಿಸಿದೆ. ಮುಂಚಿತವಾಗಿ ತಿಳಿಸದೇ ಏಕಾಏಕಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಿ, ನಂತರ ಶೌಚಗೃಹ ನಿರ್ಮಾಣದಲ್ಲಿ ನಡೆದ ಬೆಳವಣಿಗೆ ಕುರಿತಂತೆ ಜಿಲ್ಲಾಧಿಕಾರಿಗಳ ಜತೆ ಚರ್ಚೆ ನಡೆಸಲಿದ್ದಾರೆ. ಹಣದ ಸದ್ಬಳಕೆ, ನಿಜವಾದ ಫಲಾನುಭವಿಗಳು, ಒದಗಿಸಿರುವ ಸೌಲಭ್ಯಗಳ ಕುರಿತಂತೆ ಅಧಿಕಾರಿಗಳು ಮಾಹಿತಿ ಪಡೆಯಲಿದ್ದು, ಅದರ ಆಧಾರದಲ್ಲಿ ಸಲಹೆಗಳನ್ನು ರವಾನಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದಲ್ಲದೇ, ಮಧ್ಯಾಹ್ನದ ಬಿಸಿಯೂಟ, ಸರ್ವಶಿಕ್ಷಾ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನದ ಕುರಿತೂ ಅಧಿಕಾರಿಗಳು ಮಾಹಿತಿ ಸಂಗ್ರಹಿಸಲಿದ್ದಾರೆ.**




- ದೇಸೀಯವಾಗಿ ಅಭಿವೃದ್ಧಿಪಡಿಸಿರುವ 'ನಾಗ್' ಟ್ಯಾಂಕ್ ನಿರೋಧಕ ಕ್ಷಿಪಣಿಯ ಪರೀಕ್ಷೆಯನ್ನು ರಾಜಸ್ತಾನದ ಜೈಸಲ್ಮೇರ್‌ನಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ. ಹೆಲಿಕ್ಯಾಪ್ಟರ್ ಮೂಲಕ ಹಾರಿಸುವ ಈ ಕ್ಷಿಪಣಿಯು 7 ಕಿ.ಮೀ. ದೂರದ ಗುರಿಯನ್ನು ನಿಖರವಾಗಿ ಮುಟ್ಟುವ ಸಾಮರ್ಥ್ಯ ಹೊಂದಿದೆ. ಇತ್ತೀಚೆಗೆ ರಾಜಸ್ತಾನದಲ್ಲಿ ಹೆಲಿಕ್ಯಾಪ್ಟರ್ ಮೂಲಕ ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಈ ಕ್ಷಿಪಣಿಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) 'ಗೈಡೆಡ್ ಮಿಸೈಲ್ ಡೆವಲಪ್‌ಮೆಂಟ್ ಪ್ರೋಗ್ರಾಂ' (ಐಜಿಎಂಡಿಪಿ) ಯೋಜನೆಯಲ್ಲಿ ಅಭಿವೃದ್ಧಿಪಡಿಸಿದೆ.

- ಮಂಗಳ ಗ್ರಹಕ್ಕೆ ಮಾನವನ್ನು ಕಳುಹಿಸುವ ನಾಸಾದ ಮಹತ್ವಾಕಾಂಕ್ಷಿ ಯೋಜನೆಯ ಪ್ರಯತ್ನವಾಗಿ ಮೊದಲ ವಾಣಿಜ್ಯ ಅಂತರಿಕ್ಷ ವಾಹನವನ್ನು ಚಲಾಯಿಸಲು ಭಾರತ ಮೂಲದ ಸುನಿತಾ ವಿಲಿಯಮ್ಸ್ ಸೇರಿದಂತೆ ನಾಲ್ವರನ್ನು ಅಮೆರಿಕದ ನಾಸಾ ಸಂಸ್ಥೆ ಆಯ್ಕೆ ಮಾಡಿದೆ. ಇದು ಮಂಗಳನ ಮೇಲೆ ಮನುಷ್ಯನನ್ನು ಕಳುಹಿಸುವ ಪ್ರಯತ್ನದ ಮೊದಲ ಭಾಗವಾಗಿದೆ. ನಾಸಾದ ಹಿರಿಯ ಅಂತರಿಕ್ಷ ಯಾತ್ರಿಗಳಲ್ಲಿ ಒಬ್ಬರಾಗಿರುವ ಸುನಿತಾ, 322 ದಿನಗಳನ್ನು ಅಂತರಿಕ್ಷದಲ್ಲಿ ಕಳೆದಿದ್ದಾರೆ. 50 ಗಂಟೆ 40 ನಿಮಿಷ ಅಂತರಿಕ್ಷ ನಡಿಗೆ ಮಾಡುವ ಮೂಲಕ ಅತಿ ಹೆಚ್ಚು ಸಮಯದ ಅಂತರಿಕ್ಷ ನಡಿಗೆ ಮಾಡಿದ ಮಹಿಳಾ ಅಂತರಿಕ್ಷಯಾನಿ ಎಂಬ ದಾಖಲೆ ಹೊಂದಿದ್ದಾರೆ. ಅಮೆರಿಕದ ಸಾರ್ವಕಾಲಿಕ ಅಂತರಿಕ್ಷ ಯಾತ್ರಿಗಳ ಸಾಲಿನಲ್ಲಿ 6ನೇ ಸ್ಥಾನದಲ್ಲಿರುವ ಸುನಿತಾ, ಸಾರ್ವಕಾಲಿಕ ಮಹಿಳಾ ಅಂತರಿಕ್ಷ ಯಾತ್ರಿಗಳ ಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದ್ದಾರೆ.

- **ಕೇಂದ್ರ ಏಷ್ಯಾ ದೇಶಗಳ ಜೊತೆಗೆ ಬಾಂಧವ್ಯ ಬೆಳೆಸುವ ಸಲುವಾಗಿ ಪ್ರಾರಂಭವಾದ ಶಾಂಘೈ ಸಹಕಾರ ಒಕ್ಕೂಟದಲ್ಲಿ (ಎಸ್‌ಸಿಒ) ಭಾರತವು ಪೂರ್ಣ ಸದಸ್ಯತ್ವವನ್ನು ಪಡೆದುಕೊಂಡಿದೆ. 2001ರಲ್ಲಿ ಸ್ಥಾಪನೆಗೊಂಡ ಎಸ್‌ಸಿಒದಲ್ಲಿ ಚೀನಾ, ಕಜಾಖಿಸ್ತಾನ, ಕಿರ್ಗಿಸ್ತಾನ, ರಷ್ಯಾ, ತಜಕೀಸ್ತಾನ ಮತ್ತು ಉಜ್ಬೇಕಿಸ್ತಾನ ಪೂರ್ಣ ಸದಸ್ಯತ್ವ ಹೊಂದಿವೆ. ಆಫ್ಘಾನಿಸ್ತಾನ, ಭಾರತ, ಇರಾನ್, ಮಂಗೋಲಿಯಾ ಮತ್ತು ಪಾಕಿಸ್ತಾನ ವೀಕ್ಷಕ ಸ್ಥಾನಮಾನ ಹೊಂದಿದ್ದರೆ, ಬೆಲಾರಸ್, ಟರ್ಕಿ ಮತ್ತು ಶ್ರೀಲಂಕಾ ಚರ್ಚಾ ಪಾಲುದಾರ ಸ್ಥಾನಮಾನ ಹೊಂದಿವೆ.**

- ಸಂಪೂರ್ಣ ಸ್ವದೇಶಿ ತಂತ್ರಜ್ಞಾನದಲ್ಲಿ ಯುದ್ಧವಿಮಾನ ವಾಹಕ ನೌಕೆಗಳ ನಿರ್ಮಾಣಕ್ಕೆ ನಿರ್ಧರಿಸಿರುವ ಕೇಂದ್ರ ಸರ್ಕಾರ ದೇಶದ ಒಂಬತ್ತು ಹಡಗು ನಿರ್ಮಾಣ ಸಂಸ್ಥೆಗಳನ್ನು ಗುರುತಿಸಿದೆ. ಇವುಗಳ ಪೈಕಿ 4 ಖಾಸಗಿ ಒಡೆತನಕ್ಕೆ ಸೇರಿದ್ದು, ಉಳಿದವು ಸರ್ಕಾರಿ ಸ್ವಾಮ್ಯದವುಗಳಾಗಿವೆ. 'ಮೇಕ್ ಇನ್ ಇಂಡಿಯಾ' ಯೋಜನೆಯಡಿ ಭಾರತೀಯ ನೌಕಾದಳಕ್ಕಾಗಿ ತಲಾ 50 ಯುದ್ಧವಿಮಾನಗಳನ್ನು ಕೊಂಡೊಯ್ಯುವ ಸಾಮರ್ಥ್ಯದ ಹಡಗುಗಳನ್ನು ನಿರ್ಮಾಣ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

**ರಾಷ್ಟ್ರೀಯ ಸ್ವಯಂಸೇವಕ ಸಂಘವು ನೂತನವಾಗಿ ಮೊಬೈಲ್ ಆಪ್ಲಿಕೇಷನ್ ಬಿಡುಗಡೆ ಮಾಡಿದೆ. ಆರ್‌ಎಸ್‌ಎಸ್‌ನ ಮೀಡಿಯಾ ಸೆಂಟರ್ ವಿಶ್ವ ಸಂವಾದ ಕೇಂದ್ರವು 'ಸಂವಾದ' ಎಂಬ ಹೆಸರಿನಲ್ಲಿ ಈ ಆ್ಯಪ್ ಅಭಿವೃದ್ಧಿ ಪಡಿಸಿದ್ದು, ಈಗಾಗಲೇ 70 ಸಾವಿರ ಮಂದಿ ಇದರ ಸೇವೆ ಪಡೆಯುತ್ತಿದ್ದಾರೆ. ಈ ಮೂಲಕ 90 ವರ್ಷ ಇತಿಹಾಸ ಹೊಂದಿರುವ ಆರ್‌ಎಸ್‌ಎಸ್ ಆಧುನಿಕ ತಂತ್ರಜ್ಞಾನದೊಂದಿಗೆ ಸ್ನೇಹ ಸಂಪಾದಿಸಿದೆ. ಸಂಘ ಪರಿವಾರದ ರಾಷ್ಟ್ರೀಯ ಮಟ್ಟದ ಚಟುವಟಿಕೆಗಳು ಹಾಗೂ ಧಾರ್ಮಿಕ ಸಂಬಂಧಿತ ಮಾಹಿತಿಗಳನ್ನು ಈ ಆ್ಯಪ್‌ನಲ್ಲಿ ಲಭ್ಯವಿರುತ್ತದೆ.**



पुंगव PUNGAVA

# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17

1-8-2015



### 19 ವರ್ಷಗಳ ನಂತರ ಶತಮಾನದ ಮೊದಲ 'ನಬಕಲೆಬರ' ಉತ್ಸವ

# ಪುರಿ ರಥಯಾತ್ರೆ : ಆರೆಸ್ಸೆಸ್‌ನಿಂದ ಸೇವಾಕಾರ್ಯ

ದೇವಾಲಯಗಳ ನಗರಿ ಪುರಿಯಲ್ಲಿ ಈ ಶತಮಾನದ ಮೊದಲ 'ನಬಕಲೆಬರ' ರಥ ಯಾತ್ರೆ ಜುಲೈ 4ರಂದು ಆರಂಭವಾಗಿದೆ. 9 ದಿನಗಳ ಕಾಲ ಈ ರಥಯಾತ್ರೆಯು ನಡೆಯಲಿದ್ದು, ರಥಯಾತ್ರೆಗೆ ಆಗಮಿಸುವ ಭಕ್ತಾಧಿಗಳಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘವು 9 ರೀತಿಯ ವಿವಿಧ ಸೇವಾ ಚಟುವಟಿಕೆಗಳನ್ನು ಆರಂಭಿಸಿದೆ. ಸಂಚಾರಿ ಪ್ರಥಮ ಚಿಕಿತ್ಸಾ ಘಟಕ, ಆಂಬುಲೆನ್ಸ್ ಸೇವೆ, ಆಸ್ಪತ್ರೆ, 16 ಕಡೆಗಳಲ್ಲಿ ಶುದ್ಧ ನೀರು ವಿತರಣಾ ಕೇಂದ್ರ, ವಿವಿಧ ಸ್ಥಳಗಳಿಗೆ ಮಾಹಿತಿ ನೀಡುವ ಟ್ರಾಫಿಕ್ ವ್ಯವಸ್ಥೆ, ಸೂಕ್ಷ್ಮ ಸ್ಥಳಗಳಲ್ಲಿ ಪೊಲೀಸ್‌ರೊಂದಿಗೆ ಸೇರಿ ಭದ್ರತಾ ವ್ಯವಸ್ಥೆ, ಅಗತ್ಯ ಆಹಾರ ಪೂರೈಕೆ ಸೇರಿದಂತೆ 9 ರೀತಿಯ ಸೇವಾ ಚಟುವಟಿಕೆಗಳಲ್ಲಿ ಆರೆಸ್ಸೆಸ್‌ನ ಸ್ವಯಂಸೇವಕರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಈ ರಥಯಾತ್ರೆಯನ್ನು ವೀಕ್ಷಿಸಲು ಜುಲೈ 4ರಂದು ದೇಶದ ನಾನಾ ಕಡೆಯಿಂದ ಹಾಗೂ ವಿದೇಶದಿಂದ ಲಕ್ಷಾಂತರ ಸಂಖ್ಯೆಯ ಭಕ್ತರೂ ಸೇರಿದಂತೆ ಒಟ್ಟು 20 ಲಕ್ಷಕ್ಕೂ ಅಧಿಕ ಜನ ಆಗಮಿಸಿದ್ದರು. 'ನಬಕಲೆಬರ' ರಥೋತ್ಸವದ ಅಂಗವಾಗಿ ಪ್ರತಿ ವರ್ಷ ಸೇರುತ್ತಿದ್ದ ಜನಸ್ತೋಮಕ್ಕಿಂತ ಈ ವರ್ಷ ಅಧಿಕ ಮಂದಿ ಉತ್ಸವದಲ್ಲಿ ಭಾಗವಹಿಸಿದ್ದಾರೆ. 19 ವರ್ಷದ ನಂತರ ಪುರಿ ದೇವಾಲಯದ ದೇವರುಗಳಾದ ಜಗನ್ನಾಥ, ಬಲಭದ್ರ ಹಾಗೂ ಸುಭದ್ರೆಯರ ಹೊಸದಾದ ಮರದ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವುದು ಈ ಭಾರಿಯ 'ನಬಕಲೆಬರ' ರಥಯಾತ್ರೆಯ ವಿಶೇಷ. ಈ ಹಿಂದೆ 1996ರಲ್ಲಿ ಈ ರಥಯಾತ್ರೆ ನಡೆದಿತ್ತು.



# ಬದಲಾವಣೆ ತಂದ ಮಹಿಳೆಯರ ಮಾಹಿತಿ ನೀಡಿ

ರಾಷ್ಟ್ರದಲ್ಲಿ ವಿವಿಧ ಸಮುದಾಯಗಳಲ್ಲಿ ಬದಲಾವಣೆ ತರುವಲ್ಲಿ ಯಶಸ್ವಿಯಾದ ಅತ್ಯಂತ ಪ್ರಭಾವಿ ಮಹಿಳೆಯರ ಬಗ್ಗೆ ಮಾಹಿತಿ ಸಂಗ್ರಹಿಸಲು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ತಮ್ಮ ಸುತ್ತಮುತ್ತಲಿನಲ್ಲಿರಬಹುದಾದ ಅತ್ಯಂತ ಪ್ರಭಾವಿ ಮಹಿಳೆಯರ ಬಗ್ಗೆ ಮಾಹಿತಿ ಕೊಡುವಂತೆ ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಮನೇಕಾ ಗಾಂಧಿ ಮನವಿ ಮಾಡಿಕೊಂಡಿದ್ದಾರೆ. ಇದಕ್ಕಾಗಿ ಇಲಾಖೆ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನ ಸಹಕಾರ ಪಡೆದುಕೊಂಡಿದೆ. ವಿವಿಧ ಸಮುದಾಯಗಳಲ್ಲಿ ಬದಲಾವಣೆ ತರುವಂಥ ಪ್ರಭಾವ ಬೀರಿದ ಮಹಿಳೆಯರ ಬಗ್ಗೆ ಫೇಸ್‌ಬುಕ್‌ನಲ್ಲಿ ಮಾಹಿತಿ ಅಳವಡಿಸಬಹುದಾಗಿದೆ. ಇದಕ್ಕೆಂದೇ ಸಚಿವಾಲಯ https://www.facebook.com/ministry WCD ಎಂಬ ಫೇಸ್‌ಬುಕ್ ಲಿಂಕ್ ಅನ್ನು ಅಣಿಗೊಳಿಸಿದೆ. ಈ ಲಿಂಕ್‌ನಲ್ಲಿ ಗರಿಷ್ಠ ಶಿಫಾರಸು ಪಡೆದುಕೊಳ್ಳುವ ಮಹಿಳೆಯರ ಮಾಹಿತಿಗಳೆಲ್ಲವನ್ನೂ ಕಲೆ ಹಾಕಿ, ತೀರ್ಪುಗಾರರ ಮಂಡಳಿಗೆ ಕೊಡಲಾಗುತ್ತದೆ. ಇವರ ಪೈಕಿ ಅತಿಹೆಚ್ಚು ಪ್ರಭಾವ ಬೀರುವಲ್ಲಿ ಯಶಸ್ವಿಯಾದ 100 ಮಂದಿ ಮಹಿಳೆಯರನ್ನು ತೀರ್ಪುಗಾರ ಮಂಡಳಿ ಅಂತಿಮವಾಗಿ ಆಯ್ಕೆ ಮಾಡಲಿದೆ. ಈ ಲಿಂಕ್ ಜು.15 ರಿಂದ ಕಾರ್ಯಾರಂಭ ಮಾಡಲಿರುವುದಾಗಿ ಸಚಿವಾಲಯದ ಮೂಲಗಳು ತಿಳಿಸಿವೆ. ತಮ್ಮ ಸುತ್ತಮುತ್ತ ಇರಬಹುದಾದ ಸಮುದಾಯಗಳಲ್ಲಿ ಬದಲಾವಣೆ ತರಲು ಪ್ರಭಾವ ಬೀರಿದ ಮಹಿಳೆಯರ ಬಗ್ಗೆ ಫೇಸ್‌ಬುಕ್‌ನಲ್ಲಿ ಮಾಹಿತಿ ಅಳವಡಿಸುವಂತೆ ಸಚಿವೆ ಮನೇಕಾ ಗಾಂಧಿ ಅವರು ಮನವಿ ಮಾಡಿಕೊಂಡಿದ್ದಾರೆ.

# ವಲಸೆ ಹಿಂದೂಗಳಿಗೆ ಆಸ್ತಿ ಹಕ್ಕು

ಪಾಕಿಸ್ತಾನ, ಆಫ್ಘಾನಿಸ್ತಾನ, ಬಂಗ್ಲಾ ದೇಶದಿಂದ ವಲಸೆ ಬಂದಿರುವ ಹಿಂದೂಗಳಿಗೆ ಶೀಘ್ರದಲ್ಲೇ ಬ್ಯಾಂಕ್ ಖಾತೆ ತೆರೆಯುವ ಮತ್ತು ವಸತಿ ಉದ್ದೇಶಕ್ಕಾಗಿ ಆಸ್ತಿ ಖರೀದಿಸುವ ಹಕ್ಕು ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ. ವಲಸೆ ಬಂದಿರುವ ಹಿಂದೂಗಳಿಗೆ ಬ್ಯಾಂಕ್ ಖಾತೆ ತೆರೆಯಲು, ವಸತಿ ಉದ್ದೇಶಕ್ಕಾಗಿ ಆಸ್ತಿ ಖರೀದಿಸಲು ರಿಸರ್ವ್ ಬ್ಯಾಂಕ್ ಈಗಾಗಲೇ ಅನುಮತಿ ನೀಡಿದ್ದು, ಇದರ ಬೆನ್ನಲ್ಲೇ ಇದರ ಅನುಷ್ಠಾನಕ್ಕೆ ಗೃಹ ಸಚಿವಾಲಯ ಚಾಲನೆ ನೀಡಿದೆ.

ಭಾರತದ ಪೌರತ್ವ ಪಡೆಯದೆ ಇದ್ದರೂ, ದೀರ್ಘಾವಧಿ ವೀಸಾ ಹೊಂದಿರುವವರು ಈ ಸೌಲಭ್ಯ ಪಡೆಯಲು ಅರ್ಹರಾಗಿದ್ದಾರೆ. ವಿದೇಶಿ ನೋಂದಣಿ ಕಚೇರಿ ಅಥವಾ ವಿದೇಶಿ ಪ್ರಾದೇಶಿಕ ನೋಂದಣಿ ಕಚೇರಿಯಿಂದ ಪಡೆದ ನಿವಾಸಿ ಪರವಾನಗಿಯ ಆಧಾರದ ಮೇಲೆ ಹಿಂದೂ ವಲಸಿಗರು ಬ್ಯಾಂಕ್ ಖಾತೆ ತೆರೆಯಬಹುದಾಗಿದೆ. ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ತನ್ನ ಒಂದು ವರ್ಷದಲ್ಲಿ ನಾಲ್ಕು ಸಾವಿರ ವಲಸೆ ಹಿಂದೂಗಳಿಗೆ ಭಾರತೀಯ ಪೌರತ್ವ ನೀಡಿದ್ದು, ಮತ್ತಷ್ಟು ಮಂದಿಗೆ ನೀಡುವ ಪ್ರಕ್ರಿಯೆ ನಡೆಸುತ್ತಿದೆ. ಈ ಮೂಲಕ ಯುಪಿಎ–2 ಐದು ವರ್ಷದ ಅವಧಿಯಲ್ಲಿ ನೀಡಿದ್ದಕ್ಕಿಂತ ನಾಲ್ಕು ಪಟ್ಟು ಹೆಚ್ಚು ಮಂದಿಗೆ ಒಂದೇ ವರ್ಷದಲ್ಲಿ ಭಾರತೀಯ ಪೌರತ್ವ ದೊರೆತಿದೆ. ಪಾಕಿಸ್ತಾನದಿಂದ ವಲಸೆ ಬಂದಿರುವ ಹಿಂದೂಗಳಿಗೆ 'ಅನಿವಾಸಿ ಭಾರತೀಯ ರೂಪಾಯಿ ಖಾತೆ (ಎನ್‌ಆರ್‌ಒ)' ತೆರೆಯಲು ಅವಕಾಶ ನೀಡುವ ಸಾಧ್ಯತೆ ಇದೆ. ಇದಕ್ಕೆ ರಿಸರ್ವ್ ಬ್ಯಾಂಕ್ ಒಪ್ಪಿಗೆ ಬೇಕಾಗಿಲ್ಲ.

# ಲಂಕಾದಲ್ಲಿ ರಾಮಾಯಣ ಪ್ರವಾಸೋದ್ಯಮಕ್ಕೆ ಭಾರತ ಸಹಕಾರ

ರಾಮಾಯಣ ಮಹಾಕಥನಕ್ಕೆ ಸಾಕ್ಷಿಯಾದ ಶ್ರೀಲಂಕಾದ 50ಕ್ಕೂ ಹೆಚ್ಚು ಸ್ಥಳಗಳ ಅಭಿವೃದ್ಧಿಗೆ ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ ಎಂದು ಶ್ರೀಲಂಕಾ ಪ್ರವಾಸೋದ್ಯಮ ಉತ್ತೇಜನ ಸಂಸ್ಥೆ ತಿಳಿಸಿದೆ. ಪ್ರಮುಖವಾಗಿ ಭಾರತೀಯ ಗ್ರಾಹಕರನ್ನು ಗುರಿಯಾಗಿಟ್ಟುಕೊಂಡು ಶ್ರೀಲಂಕಾ ಸರ್ಕಾರ 'ರಾಮಾಯಣ ಟ್ರಯಲ್' ಪ್ಯಾಕೇಜ್ ಯೋಜನೆ ರೂಪಿಸಿದೆ. ಸೀತೆಯನ್ನು ಕೂಡಿಟ್ಟಿದ್ದ ಅಶೋಕ ವಾಟಿಕಾ, ಹನುಮಂತನ ದೇವಸ್ಥಾನ, ಸೀತಾ ಮಂದಿರ ಸೇರಿ ಪ್ರಸಿದ್ಧ ಸ್ಥಳಗಳ ಜತೆಗೆ, ವಾಟಿಕಾಗೆ ಒಯ್ಯುವ ಮುನ್ನ ಸೀತೆಯನ್ನಿಡಲಾಗಿದ್ದ ಸೀತಾ ಪೋಕುನ, ಸೀತಾ ಕೋಟುವಾ, ರಾವಣನ ಪುಷ್ಪಕ ವಿಮಾನ ಕಾರ್ಯಾಗಾರ ಗುರುಲುಪೋಥ, ರಾವಣ ಹೊತ್ತೊಯ್ಯುವಾಗ ಸೀತೆ ಕಣ್ಣೀರ ಹನಿ ಉದುರಿತು ಎನ್ನಲಾದ ಕಣ್ಣೀರ ಕೊಳ ಸೇರಿ ಹಲವು ಪ್ರದೇಶಗಳನ್ನು ಕೋಟ್ಯಂತರ ರೂ. ವೆಚ್ಚದಲ್ಲಿ ಶ್ರೀಲಂಕಾ ಪ್ರವಾಸೋದ್ಯಮ ಉತ್ತೇಜನ ಸಂಸ್ಥೆ ಅಭಿವೃದ್ಧಿಪಡಿಸುತ್ತಿದೆ. ಈ ಯೋಜನೆಗೆ ಸಹಾಯ ಒದಗಿಸುವುದಾಗಿ ಮೋದಿ ತಿಳಿಸಿದ್ದಾರೆ.



# ಹೇಮರಾಜ್ ರುಂಡ ಕತ್ತರಿಸಿದ್ದ ಉಗ್ರ ಅನ್ವರ್ ಹತ್ಯೆ



ಹೇಮರಾಜ್

ಯೋಧ ಲ್ಯಾನ್ಸ್ ನಾಯಕ್ ಹೇಮರಾಜ್ ಶಿರಚ್ಛೇದನ ಮಾಡಿದ್ದ ಉಗ್ರನನ್ನು ಹತ್ಯೆಗೈಯುವಲ್ಲಿ ಭಾರತೀಯ ಸೇನಾಪಡೆ ಯಶಸ್ವಿಯಾಗಿದೆ. ಹೇಮರಾಜ್ ರುಂಡ ಕತ್ತರಿಸಿದ್ದ ಅನ್ವರ್ ಖಾನ್‌ನನ್ನು ಪೂಂಛ್ ವಲಯದ ಗಡಿ ನಿಯಂತ್ರಣ ರೇಖೆ ಬಳಿ ಯೋಧರು ಇತ್ತೀಚೆಗೆ ಹತ್ಯೆಗೈದರು.

ಅನ್ವರ್ ನೇತೃತ್ವದ ಉಗ್ರರ ತಂಡವೊಂದು ಪೂಂಛ್ ವಲಯದ ಬಾಲೋನಿ ಎಂಬಲ್ಲಿ ಭಾರತದ ಗಡಿಯೊಳಕ್ಕೆ ನುಗ್ಗಲು ಯತ್ನಿಸಿತ್ತು. ಈ ವೇಳೆ ಕಾರ್ಯಾಚರಣೆ ನಡೆಸಿದ್ದ ಯೋಧರು ಅನ್ವರ್‌ನನ್ನು ಹತ್ಯೆಗೈದಿದ್ದಾರೆ. 2013ರ ಜನವರಿ 8ರಂದು ಯೋಧ ಹೇಮರಾಜ್‌ರ ಶಿರಚ್ಛೇದ ಮಾಡಲಾಗಿತ್ತು. ಹತ್ಯೆ ನಂತರ ಉಗ್ರರು ಹೇಮರಾಜ್ ರುಂಡವನ್ನು ಪಾಕಿಸ್ತಾನಕ್ಕೆ ತೆಗೆದುಕೊಂಡು ಹೋಗಿದ್ದರು. ಇದು ಭಾರತದ ಆಕ್ರೋಶಕ್ಕೆ ಕಾರಣವಾಗಿತ್ತು. ಇದು ಅನ್ವರ್ ಖಾನ್‌ನದ್ದೇ ಕೃತ್ಯ ಎನ್ನಲಾಗಿದ್ದು, ಇದಕ್ಕಾಗಿ ಪಾಕ್ ಬೇಹುಗಾರಿಕಾ ಸಂಸ್ಥೆ ಐಎಸ್‌ಐ ಆತನಿಗೆ 5 ಲಕ್ಷ ರೂ. ಬಹುಮಾನ ನೀಡಿತ್ತು. ಅನ್ವರ್ 1996ರಲ್ಲೂ ಸೇನಾ ಕ್ಯಾಪ್ಟನ್ ಒಬ್ಬರನ್ನು ಹತ್ಯೆಗೈದಿದ್ದ.



ಸಂಭ್ರಮದಲ್ಲಿ ಹೇಮರಾಜ್‌ರ ಧರ್ಮಪತ್ನಿ ಮತ್ತು ಮಗು

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04.
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ ವಿವರ ಮತ್ತು ವಿಳಾಸ ಬದಲಾವಣೆಗಾಗಿ : 97391 83021
ಸಂಪಾದಕೀಯ : 9731264009